# ಮುನ್ನುಡಿ

**ಶಿರಡಿ ಸ್ಥಳದಲ್ಲಿ ಬೇವಿನ ಮರದಡಿಯಲ್ಲಿ ಹದಿನಾರು ವರ್ಷದ ಬಾಲಕನಾಗಿ ಸಾಯಿಬಾಬಾ ಪ್ರಕಟವಾದರು**

ಭೂಮಿದೇವಿಯನ್ನು ತಾಯೆಂದು, ಆಕಾಶವನ್ನು ತಂದೆಯೆಂದು ಸ್ವೀಕರಿಸಿ ಸಾಯಿ ಬಾಬಾವಿನ ರೂಪದಲ್ಲಿ ದೇವನು ಅವತರಿಸಿದನು.

ಮಹಾಪುರುಷರಿಗೆ ಜಾತಿ, ಮತ ದಂಢ ಭೇದವಿಲ್ಲ, ದಯೆ, ಶಾಂತಿ ಮತ್ತು ಧರ್ಮವೇ ಮಹಾಪುರುಷರ ಜಾತಿಯಾಗುತ್ತದೆ. ದೀನ ದಯಾಳುವಾದ ಸಾಯಿಬಾಬಾ ಈ ಜಗತ್ತಿನಲ್ಲಿರುವ ಭಕ್ತರನ್ನು ರಕ್ಷಿಸುವುದಕ್ಕಾಗಿಯೇ ಈ ಸುಖ ದುಃಖ ತುಂಬಿರುವ ಜಗತ್ತಿನಲ್ಲಿ ಅವತರಿಸಿದರು. ಎಲ್ಲರ ದೇವನು ಒಬ್ಬನೇ (सबका मालिक एक है) ಎಂದು ಸಾಯಿ ಬಾಬಾ ಹೇಳಿದ್ದಾರೆ.

ಯಾರು ಶ್ರದ್ಧೆ ಮತ್ತು ತಾಳ್ಮೆಯಿಂದ ಅವರನ್ನು ನಮಸ್ಕರಿಸುತ್ತಾರೋ ಅವರಿಗೆ ಬಾಬಾ ಖಂಡಿತ ಸಹಾಯ ಮಾಡುತ್ತಾರೆ. ನಿನ್ನೆಯ ದಿನವನ್ನು ಮರೆತು ಬಿಡು. ಈ ದಿನದಿಂದ ಸರಿಯಾದ ದಾರಿಯಲ್ಲಿ ಬಾಳುವುದನ್ನು ಕಲಿ ಎಂದು ಉಪದೇಶಿಸಿದರು.

ನಮ್ಮ ಅಂತರಾತ್ಮವನ್ನು ನೆನೆದು ಈಶ್ವರನನ್ನು ಕುರಿತು ಧ್ಯಾನ ಮಾಡಬೇಕು. ಸಾಯಿ ಭಕ್ತಿ ಎನ್ನುವ ಜ್ಯೋತಿಯನ್ನು ನಮ್ಮ ಮನದಲ್ಲಿ ಬೆಳಗಿಸಿ ಆನಂದಿಸಬೇಕು. ಭಗನಂತನನ್ನು ಹೊರಗೆಲ್ಲೂ ಹುಡುಕದೆ, ಅವನು ನಮ್ಮೊಳಗಿದ್ದಾನೆ ಎಂಬುದನ್ನು ಸ್ಮರಿಸಬೇಕು.

ಯಾರು ಸಾಯಿ ಭಕ್ತಿಯನ್ನು ತನ್ನ ಮನದಲ್ಲಿ ಬೆಳೆಸುತ್ತಾನೋ, ಅವನ ಕಷ್ಟಗಳು ದೂರವಾಗುತ್ತವೆ. ಸುಖ ತುಂಬಿರುವವನಾಗುತ್ತಾನೆ. ಸಾಯಿ ಬಾಬಾವಿನ ಮೇಲೆ ಯಾರು ಸಂಪೂರ್ಣ ಭಕ್ತಿಯನ್ನಿಡುತ್ತಾನೋ ಅವನ ಇಚ್ಛೆಗಳನ್ನು ಅವರು ಪೂರ್ತಿ ಮಾಡುತ್ತಾರೆ.

ನಾನೇ ಸತ್ಯ ಎಂದು ನಂಬುವವರಿಗೆ ಅವರ ಅನುಭವವೇ ಸಾಕ್ಷಿಯಾಗುತ್ತದೆ. ಯಾರು ನನ್ನ ಶರಣಾಗುತ್ತಾನೋ ಅವರ ಕಾರ್ಯ ಸಿದ್ಧಿ ಮಾಡುತ್ತೇನೆ. ನನ್ನ ಭಕ್ತ ನನ್ನನ್ನು ಯಾವ ರೂಪದಲ್ಲಿ ಬಯಸುತ್ತಾನೋ ಅವನಿಗೆ ಅದೇ ರೂಪದಲ್ಲಿ ದರ್ಶನ ನೀಡುತ್ತೇನೆ. ಯಾರು ತನ್ನನ್ನು ನನಗೆ ಅರ್ಪಿಸುತ್ತಾನೋ ನಾನು ಅವನಿಗೆ ಸಹಾಯ ಮಾಡುತ್ತೇನೆ. ಯಾರು ಅವನ ಮೈ, ಮನಸ್ಸು, ಧನ ಕಾರ್ಯಗಳನ್ನು ನನಗೇ





ಅರ್ಪಿಸುತ್ತಾನೋ, ಯಾರು ತನ್ನ ಕಷ್ಟಗಳನ್ನು ನನ್ನ ಪಾದಗಳ ಮೇಲೆ ಹಾಕುತ್ತಾನೋ, ಯಾರು ಸಾಯಿ ನಾಮವನ್ನು ಸದಾ ಜಪಿಸುತ್ತಾನೋ ಅವನು ಸಕಲ ಪಾಪಗಳಿಂದ ದೂರಾಗಿ ನನ್ನ ಶರಣಾಗುತ್ತಾನೆ ಎಂದು ಸಾಯಿಬಾಬಾ ಪ್ರಮಾಣ ಮಾಡಿದ್ದಾರೆ. ಧರ್ಮ ತಲೆಬಗ್ಗಿದಾಗ, ಅಧರ್ಮ ತಲೆ ಎತ್ತಿದಾಗ ದೇವರು ಬಹು ರೂಪಗಳಲ್ಲಿ ಈ ಜಗಕ್ಕಿಳಿದು ಬಂದು ಧರ್ಮವನ್ನು ಸ್ಥಾಪನೆ ಮಾಡಿ, ಪ್ರಜೆಗಳಿಗೆ ಹೊಸ ದಾರಿಯನ್ನು ತೋರಿಸಿದ್ದಾರೆ. ಇಂತಹ ಅವತಾರಗಳಲ್ಲಿ ಶಿರಡಿ ಸಾಯಿ ಬಾಬಾರವರ ಹೆಸರನ್ನು ತಿಳಿಯದೆ ಇರುವವರು ಯಾರಿದ್ದಾರೆ? ಸಾಯಿ ಭಕ್ತಿಯ ತಿಳಿಯದೆ ಇರುವವರು ಯಾರಿದ್ದಾರೆ? ಸಾಯಿ ಭಕ್ತಿಯ ಶಕ್ತಿಯನ್ನು ಅರಿತ ಅವರ ಭಕ್ತಾದಿಗಳು ಅವರನ್ನು ಆ ಪರಮೇಶ್ವರನ ರೂಪವೇ ಎಂದು ನಂಬುತ್ತಾರೆ. ಸಾಯಿ ಬಾಬಾ ಒಬ್ಬ ಹಿಂದು ಎಂದು ಯಾರಾದರೂ ಹೇಳಿದರೇ ಅವರು ಆ ಜನರಿಗೆ 'ಕುರಾನ್' ಮಂತ್ರಗಳನ್ನು ಓದಿ ತೋರಿಸುತ್ತಾರೆ. ಅವರನ್ನು ಮುಸ್ಲಿಮ್ ಎಂದು ಯಾರಾದರೂ ಹೇಳಿದರೇ ಅವರಿಗೆ ಬಾಬಾ ಸಂಸ್ಕೃತದಲ್ಲಿ ಶಿವಸ್ತೋತ್ರಗಳನ್ನು ಹೇಳಿ ಆಶ್ಚರ್ಯಪಡಿಸುತ್ತಾರೆ. ಸಾಯಿ ಬಾಬಾ ಹಿಂದು ಮತ್ತು ಮುಸ್ಲಿಮ್‌ರ ಏಕ ಸೂತ್ರವಾಗಿದ್ದರು.

ಬಾಬಾ ಕೆಲವರಿಗೆ ಶಿವರೂಪದಲ್ಲೂ, ಮತ್ತೆ ಕೆಲವರಿಗೆ ವಿಷ್ಣು ರೂಪದಲ್ಲಿಯೂ ದರ್ಶನ ಕೊಟ್ಟರು. ಸಾಯಿ ರೂಪದಲ್ಲಿ ಅವರ ಚಮತ್ಕಾರಗಳನ್ನು ಸಾವಿರಾರು ಜನರು ನೋಡಿ ಸ್ಮರಿಸಿದ್ದಾರೆ. ಈ ಜಗತ್ತಿನಲ್ಲಿ ಈಗ ಸಾಯಿ ಇಲ್ಲ ಎಂದು ಯಾರು ಹೇಳಬಲ್ಲರು? ಆ ಮಾತು ಹೇಳುವವನು ಮೂರ್ಖನಲ್ಲವೇ ಇನ್ಯಾರು?

ಸಾಯಿ ಭಕ್ತರ ಪ್ರಕಾರ ಬಾಬಾ ಇನ್ನೂ ಬದುಕ್ಕಿದ್ದಾರೆ. ದುಃಖಗೊಂಡ ಭಕ್ತ ಅವರನ್ನು ಆತ್ಮೀಯವಾಗಿ ನೆನೆದಕೂಡಲೆ ಅವರು ಆ ಕ್ಷಣವೇ ಓಡೋಡಿ ಬಂದು ಅವನ ಕಷ್ಟವನ್ನು ದೂರ ಮಾಡುತ್ತಾರೆ.

ಸಾಯಿ ಬಾಬಾ ಜೀವಿಸಿದ್ದಾಗ ಅದೆಷ್ಟೋ ಚಮತ್ಕಾರಗಳನ್ನು ಮಾಡಿದ್ದಾರೆ. ಇಂದಿಗೂ ಮನಃ ಶುಭ್ರತೆಯಿಂದಲೂ, ಧೃಢ ಭಕ್ತಿಯಿಂದಲೂ, ವಿಧಿಗಳಂತೆ ಪೂಜಿಸಿದ್ದರೇ, ಸಾಯಿ ಅವರ ಭಕ್ತರ ಇಚ್ಛೆಗಳನ್ನು ಪೂರ್ತಿ ಮಾಡುತ್ತಾರೆ. ಇದು ಅವರ ಭಕ್ತರ ಅನುಭವಗಳು ಹೌದು.

''ಸಾಯಿಬಾಬಾ ಸಾಕ್ಷಾತ್ ದೇವರೇ ಆಗಿದ್ದಾರೇ''.

ಸಾಯಿ ಬಾಬಾವನ್ನು ನಂಬಿ 9 ಗುರುವಾರಗಳು ನಿಯಮದಿಂದ ವ್ರತ ಮಾಡಿದ್ದರೇ ನಾವು ಫಲ ಪಡೆಯುವುದು ಖಂಡಿತ.

ಸಾಯಿ ವ್ರತ ಮಾಡುವ ನಿಯಮಗಳನ್ನು ಓದಿರಿ.

★ ★ ★

## ಶ್ರೀ ಸಾಯಿಬಾಬಾ ವ್ರತದ ನಿಯಮಗಳು

1. ಈ ವ್ರತವನ್ನು ಪುರುಷರಾಗಲಿ, ಮಹಿಳೆಯರಾಗಲಿ ಅಥವಾ ಮಕ್ಕಳಾಗಲಿ ಯಾರು ಬೇಕಾದರೂ ಮಾಡಬಹುದು.
2. ಈ ವ್ರತವನ್ನು ಯಾವ ಜಾತಿ, ಧರ್ಮದವರೂ ಮಾಡಬಹುದು.
3. ಈ ವ್ರತ ಚಮತ್ಕಾರದ ಫಲಗಳನ್ನು ಕೊಡಬಲ್ಲದು.
4. ಯಾವುದೇ ಒಂದು ಗುರುವಾರದ ದಿನ ಸಾಯಿ ನಾಮವನ್ನು ನೆನೆದು ಈ ವ್ರತವನ್ನು ಆರಂಭಿಸಿಬಹುದು. ಯಾವ ಕಾರ್ಯ ಸಿದ್ಧಕ್ಕಾಗಿ ಆರಂಭಿಸುತ್ತೇವೋ ಅದನ್ನು ಶುದ್ಧವಾದ ಮನಸ್ಸಿನಿಂದ ನೆನೆದುಕೊಂಡು ಪ್ರಾರ್ಥನೆ ಮಾಡಿಕೊಳ್ಳಬೇಕು.
5. ಬೆಳಿಗ್ಗೆ ಅಥವಾ ಸಾಯಂಕಾಲ ಸಾಯಿಬಾಬಾವಿನ ಫೋಟೋಗೆ ಪೂಜೆ ಮಾಡಬೇಕು. ಒಂದು ಶುದ್ಧ ಮಣೆಯ ಮೇಲೆ ಹಳದಿ ಬಣ್ಣದ ಬಟ್ಟೆಯನ್ನು ಹಾಕಿ ಅದರ ಮೇಲೆ ಸಾಯಿ ಬಾಬಾವಿನ ಫೋಟೊವಿಟ್ಟು ಶುದ್ಧ ನೀರಿನಿಂದ ಸ್ವಚ್ಛವಾದ ಬಟ್ಟೆಯಿಂದ ಒರಿಸಿ ಗಂಧ, ಕುಂಕುಮ ತಿಲಕವನ್ನಿಟ್ಟು, ಸೇವಂತಿಗೆ ತರಹ ಇರುವ ಹಳದಿ ಬಣ್ಣದ ಹೂಮಾಲೆ ಹಾಕಿ ಇಡಬೇಕು. ಗಂಧದ ಕಡ್ಡಿ, ದೀಪ ಹಚ್ಚಿ ಸಾಯಿ ವ್ರತ ಕಥೆಯನ್ನ ಓದಬೇಕು. ಸಾಯಿ ಬಾಬಾರನ್ನು ಪ್ರಾರ್ಥಿಸಬೇಕು. ನೈವೇದ್ಯ ಮಾಡಿ ಹಣ್ಣುಗಳು, ಸಿಹಿ ತಿಂಡಿಗಳು, ಅಥವಾ ಕಲ್ಲು ಸಕ್ಕರೆ) ಪ್ರಸಾದವನ್ನು ಹಂಚಬೇಕು.
6. ಈ ವ್ರತವನ್ನು ಹಣ್ಣು ಅಥವಾ ಕಾಫಿ, ಟೀ, ಹಾಲು ತರಹದ ನೀರಾಹಾರಗಳನ್ನು ಸ್ವೀಕರಿಸಿ ಮಾಡಬೇಕು. ಈ ತರಹ ಮಾಡುವುದಕ್ಕಾಗದೆ ಇರುವವರು ಬೆಳಿಗ್ಗೆ ಅಥವಾ ರಾತ್ರಿಯಲ್ಲಿ ಒಂದು ಹೊತ್ತು ಊಟ ಮಾಡಬಹುದು.
7. 9 ಗುರುವಾರಗಳಲ್ಲಿ ಸಾಧ್ಯವಾದರೇ, ಸಾಯಿ ಬಾಬಾರವರ ದೇವಸ್ಥಾನಕ್ಕೆ ಹೋಗಿ ದರ್ಶನ ಮಾಡಬಹುದು. ಅಂತಹ ಸೌಕರ್ಯವಿಲ್ಲದವರು ತಮ್ಮ ಮನೆಯಲ್ಲಿಯೇ ಬಾಬಾವಿನ ಪೂಜೆಯನ್ನು ಶ್ರದ್ಧೆ, ಭಕ್ತಿಯಿಂದ ಮಾಡಿದರೆ ಸಾಕು.
8. ಬೇರೆ ಊರಿಗೆ ಹೋಗಿದ್ದರೂ ಅಲ್ಲಿಯೇ ಈ ಪೂಜೆ ಮಾಡಬಹುದು.
9. ವ್ರತ ಸಮಯದಲ್ಲಿ ಹೆಂಗಸರು ಹೊರಗಾದರೆ, ಅಥವಾ ಬೇರೆ ಕಾರಣಗಳಿಂದ ವ್ರತವನ್ನು ಮಾಡುವುದಕ್ಕಾಗದೆ ಇದ್ದರೆ, ಆ ಗುರುವಾರವನ್ನು ಬಿಟ್ಟು ಬೇರೆ ಗುರುವಾರದಲ್ಲಿ ವ್ರತ ಮಾಡಿ 9 ಗುರುವಾರಗಳನ್ನು ಪೂರ್ಣ ಮಾಡಬಹುದು.





## ಸಾಯಿ ವ್ರತದ ಉದ್ಯಾಪನೆ ಮಾಡುವ ನಿಯಮಗಳು

1. 9ನೇ ಗುರುವಾರ ವ್ರತವನ್ನು ಪೂರ್ತಿ ಮಾಡಬೇಕು. ಆ ದಿನ ಐದು ಬಡ ಜನರಿಗೆ ಊಟ ಹಾಕಬೇಕು. (ನಿಮ್ಮ ಕೈಲಾದಷ್ಟು) ನೇರವಾಗಿ ಊಟವನ್ನು ಕೊಡುವುದಕ್ಕಾಗದೆ ಇರುವವರು ಯಾರ ಮೂಲಕವಾದರೂ ಹಣ ಕೊಟ್ಟು ಊಟಕ್ಕೆ ವ್ಯವಸ್ಥೆ ಮಾಡಬಹುದು.
2. ಸಾಯಿ ಬಾಬಾವಿನ ಮಹಿಮೆ ಮತ್ತು ವ್ರತವನ್ನು ಪ್ರಸಾರ ಮಾಡುವುದಕ್ಕಾಗಿ ನಮ್ಮ ಮನೆ ಹತ್ತಿರ ಇರುವವರು, ಬಂಧುಗಳು ಪರಿಚಯ ಇರುವ ಜನರು ಎಂದು ಈ ವ್ರತದ ಪುಸ್ತಕಗಳನ್ನು 5, 11 ಅಥವಾ 21 ಜನರಿಗೆ ತಮ್ಮಿಂದ ಆದಷ್ಟು ಹಂಚಬೇಕು.
3. 9ನೇ ಗುರುವಾರ ನೀವು ಹಂಚಬೇಕಾಗಿರುವ ಬಾಬಾ ವ್ರತ ಪುಸ್ತಕಗಳನ್ನು ಆವತ್ತಿನ ಪೂಜೆಯಲ್ಲಿಟ್ಟು ಹಂಚಬೇಕು. ಇದರಿಂದ ಪುಸ್ತಕವನ್ನು ಪಡೆಯುವ ಭಕ್ತರಿಗೂ ತಮ್ಮ ಆಸೆಗಳು ನೆರವೇರುತ್ತವೆ.
4. ಮೇಲ್ಕಂಡ ನಿಯಮಗಳ ಪ್ರಕಾರ ವ್ರತ ಮತ್ತು ಉದ್ಯಾಪನೆಯನ್ನು ಮಾಡಿದರೆ ಖಂಡಿತವಾಗಿ ನೆನೆದುಕೊಂಡ ಕಾರ್ಯ ಜಯವಾಗುತ್ತದೆ. ಇದು ಸಾಯಿ ಭಕ್ತರ ಸಂಪೂರ್ಣವಾದ ನಂಬಿಕೆ.

## ಶ್ರೀ ಸಾಯಿ ವ್ರತದ ಕಥೆ

ಕೋಕಿಲ, ಮಹೇಶ್ ಎಂಬ ದಂಪತಿಯರು ಗುಜರಾತಿನ ಒಂದೂರಲ್ಲಿ ವಾಸಿಸುತ್ತಿದ್ದರು. ಇಬ್ಬರು ತುಂಬ ಅನ್ಯೋನ್ಯವಾದ ದಂಪತಿಗಳಾಗಿದ್ದರು. ಆದರೆ ಮಹೇಶ್ ಅವರು ಸ್ವಭಾವದಲ್ಲಿ ಜಗಳಗಂಟಿಯಾಗಿದ್ದರು. ಇಂಪಾಗಿ ಮಾತನಾಡುತ್ತಿರಲಿಲ್ಲ. ತುಂಬ ಕೋಪ ಸ್ವಭಾವದವರಾಗಿದ್ದರು. ಅವರ ಈ ಸ್ವಭಾವದಿಂದ ಅಕ್ಕಪಕ್ಕದವರಿಗೆ ತುಂಬ ತೊಂದರೆಯಾಯಿತು. ಆದರೆ ಕೋಕಿಲನ ಸ್ವಭಾವ ತುಂಬ ಧಾರ್ಮಿಕವಾಗಿತ್ತು. ದೇವರ ಮೇಲೆ ತುಂಬ ವಿಶ್ವಾಸವಿಟ್ಟುಕೊಂಡಿದ್ದರು. ಅವರ ಗಂಡ ಏನು ಹೇಳಿದರೂ ಸಹಿಸಿಕೊಳ್ಳುತ್ತಿದ್ದಳು. ಸ್ವಲ್ಪ ದಿನಗಳಲ್ಲಿ ಮಹೇಶ್ ಅವರ ವ್ಯಾಪಾರದಲ್ಲಿ ನಷ್ಟವಾಯಿತು. ಅನಂತರ ಜೀವನೋಪಾಯದ ಆಧಾರವೂ ನಿಂತು ಹೋಯಿತು. ಮಹೇಶ್ ಮನೆಯಲ್ಲೇ ಇರುವ ಪರಿಸ್ಥಿತಿ ಬಂತು. ಆದ್ದರಿಂದ ಅವರು ಇನ್ನೂ ಕೋಪಿಷ್ಠಿಯಾದರು. ಇದರಿಂದ ಮುಂಚೆಗಿಂತಲೂ ಈಗ ಅವರ ಸ್ವಭಾವ ಇನ್ನೂ ಕಿರಿಕಿರಿಯಾಗಿ ಹತ್ತಿತು.

ಒಂದು ದಿನ ಮಧ್ಯಾಹ್ನ ಒಬ್ಬ ಮಹಾಪುರುಷ ಅವರ ಬಾಗಿಲ ಹತ್ತಿರ ಬಂದನು. ಅವರ ಮುಖದಲ್ಲಿ ಒಂದು ತರಹದ ತೇಜಸ್ಸು ಮತ್ತು ಪ್ರಕಾಶ ತುಂಬಿತ್ತು. ಅವರು ಕೋಕಿಲಳ ಹತ್ತಿರ ಬೇಳೆ ಅನ್ನ ಕೊಡು ಎಂದು ಬೇಡಿಕೊಂಡರು. ಕೋಕಿಲಳು ಅವರಿಗೆ ಭಕ್ತಿಯಿಂದ ಬೇಳೆ ಅನ್ನ ಕೊಟ್ಟು ಕೈ ಮುಗಿದು ನಮಸ್ಕರಿಸಿದಳು. ಆ ಮಹಾಪುರುಷ ''ಸಾಯಿ ಬಾಬಾ ನಿಮಗೆ ಎಲ್ಲ ಸುಖವನ್ನು ಕೊಡುತ್ತಾರೆ'' ಎಂದು ಆಶೀರ್ವಾದ ಮಾಡಿದರು. ಕೋಕಿಲ ಅವರಲ್ಲಿ, ''ಸ್ವಾಮಿ; ಸುಖ, ಶಾಂತಿ ಎಂಬುವುದು ನಮ್ಮ ವಿಧಿಯಲ್ಲೇ ಇಲ್ಲ'' ಎಂದು ದುಖಃದಿಂದ ಹೇಳಿದಳು.

ಅದಕ್ಕೆ ಆ ಮಹಾಪುರುಷ, ಶ್ರೀ ಸಾಯಿಬಾಬಾ ವ್ರತದ ಬಗ್ಗೆ ಹೇಳಿದರು. 9 ಗುರುವಾರಗಳು ಹಣ್ಣು, ನೀರಾಹಾರ ಉಂಡು ಅಥವಾ ಒಪ್ಪತ್ತು ಊಟ ಮಾಡಿ ಸಾಧ್ಯವಾದರೆ ಸಾಯಿಬಾಬಾವಿನ ಮಂದಿರಕ್ಕೆ ಹೋಗಿ, ತಮ್ಮ ಮನೆಯಲ್ಲಿಯೇ ಸಾಯಿ ಬಾಬಾ ಪೂಜೆಯನ್ನು ಮಾಡಿ, ಬಡವರಿಗೆ ಅನ್ನ ದಾನ ಮಾಡಿ, ಸಾಯಿ ವ್ರತದ ಪುಸ್ತಕಗಳನ್ನು 5, 11 ಅಥವಾ 21 ಹಂಚಬೇಕು. ಹೀಗೆ ಸಾಯಿ ವ್ರತದ ಮಹಿಮೆಯನ್ನು ಪ್ರಸಾರ ಮಾಡಿದರೇ ಸಾಯಿ ಬಾಬಾ ನಿಮ್ಮ ಆಸೆಗಳನ್ನು ಪೂರ್ತಿ ಮಾಡುತ್ತಾರೆ. ಈ ವ್ರತವನ್ನು ಮಾಡುವವರಿಗೆ ಫಲ ಖಂಡಿತ. ಆದರೆ ಈ ವ್ರತ ಮಾಡುವವರು ಸಾಯಿಬಾಬಾರವರ ಮೇಲೆ ದೃಢ ವಿಶ್ವಾಸ ಮತ್ತು ಭಕ್ತಿ ಇಟ್ಟು ಕೊಂಡಿರಬೇಕು. ಯಾರು ಈ ರೀತಿಯಲ್ಲಿ ಈ ವ್ರತವನ್ನು ಮಾಡಿ ಉದ್ಯಾಪನೆ ಮಾಡುತ್ತಾರೋ ಸಾಯಿ ಬಾಬಾ ಅವರ ಕೋರಿಕೆಗಳನ್ನು ಖಂಡಿತವಾಗಿ ಪೂರ್ತಿ ಮಾಡುತ್ತಾರೆ'' ಎಂದು ಆ ಮಹಾಪುರುಷ ಆಶೀರ್ವದಿಸಿದರು.

ಕೋಕಿಲ 9 ವಾರಗಳ ವ್ರತ ಮಾಡಿ, 9ನೇ ಗುರುವಾರ ದಿನ ಬಡವರಿಗೆ ಅನ್ನ ದಾನ ಮಾಡಿದಳು. ಸಾಯಿ ವ್ರತ ಪುಸ್ತಕಗಳನ್ನು ಹಂಚಿದರು. ಅವರ ಮನೆಯಲ್ಲಿದ್ದ ಜಗಳ, ಕಷ್ಟ ದೂರ ಹೋಯಿತು. ಮನೆಯಲ್ಲಿ ಸುಖ, ಶಾಂತಿ ಬೆಳೆಯಿತು. ಹಾಗೇ ಮಹೇಶ್ ಅವರ ಸ್ವಭಾವದಲ್ಲೂ ಬದಲಾವಣೆ ಕಾಣಿಸಿತು. ಅವರ ವ್ಯಾಪಾರದಲ್ಲಿ ಮತ್ತೆ ಒಳ್ಳೆಯ ಆದಾಯ ಸಿಗುವುದು ಪ್ರಾರಂಭವಾಯಿತು.

ಕೆಲವೇ ದಿನಗಳಲ್ಲಿ ಆನಂದ ಮತ್ತು ಸಂಪತ್ತು ಅವರ ಮನೆಯನ್ನು ತುಂಬಿದ್ದವು, ಗಂಡ, ಹೆಂಡತಿ ಇಬ್ಬರೂ ಸಂತೋಷದಿಂದ ಜೀವನ ನಡೆಸಲು ಪ್ರಾರಂಭಿಸಿದರು.

ಒಂದು ದಿನ ಕೋಕಿಲರವರ ಮೈದುನ ಮತ್ತು ಅವರ ಹೆಂಡತಿ ಸೂರತ್ತಿನಿಂದ ಕೋಕಿಲ-ಮಹೇಶ್ ಮನೆಗೆ ಬಂದರು. ಹಾಗೇ ಮಾತನಾಡುವಾಗ, ಅವರ ಮಕ್ಕಳು ಸರಿಯಾಗಿ ಓದುವುದಿಲ್ಲ, ಓದಿದ್ದೆಲ್ಲವನ್ನು ಮರೆತು ಹೋಗುತ್ತಾರೆ, ಪರೀಕ್ಷೆಯಲ್ಲಿ ನಪಾಸು ಆಗಿದ್ದಾರೆ ಎಂದು ತುಂಬ ದುಃಖದಿಂದ ಹೇಳಿದರು. ಅವರಿಗೆ ಕೋಕಿಲ ಗುರುವಾರದ ವ್ರತದ ಮಹಿಮೆಯನ್ನು ತಿಳಿಸಿದರು. ಸಾಯಿ ಭಕ್ತಿಯಿಂದ ಮಕ್ಕಳು





ಚೆನ್ನಾಗಿ ಓದುತ್ತಾರೆ ಎಂದು ಹೇಳಿದರು. ಆದರೆ ಸಾಯಿ ಬಾಬಾರವರ ಮೇಲೆ ಅತೀವ ವಿಶ್ವಾಸ, ಭಕ್ತಿ ಇರಬೇಕು. ಸಾಯಿ ಎಲ್ಲರಿಗೂ ದಯೆ ಮಾಡುತ್ತಾರೆ ಎಂದು ಹೇಳಿದರು.

ಆಕೆ ವ್ರತ ವಿಧಿಗಳನ್ನು ಕೇಳಿದರು. ಅದಕ್ಕೆ ಕೋಕಿಲ 9 ಗುರುವಾರಗಳು ಹಣ್ಣು, ನೀರಾಹಾರವನ್ನು ಉಂಡು ಈ ವ್ರತ ಮಾಡಬೇಕು. ಇದು ಸಾಧ್ಯವಿಲ್ಲದವರು ಒಪ್ಪತ್ತು ಊಟ ಮಾಡಿ ಈ ಪೂಜೆಯನ್ನು ಮಾಡಬೇಕು. 9 ಗುರುವಾರಗಳು ಸಾಯಿ ಬಾಬಾವಿನ ಮಂದಿರಕ್ಕೆ ಹೋಗಬೇಕು. ಅನಂತರ,

★ ಈ ವ್ರತವನ್ನು ಗಂಡು, ಹೆಣ್ಣು, ಮಕ್ಕಳು ಸಹ ಮಾಡಬಹುದು.

★ ಗುರುವಾರಗಳಲ್ಲಿ ಸಾಯಿ ಬಾಬಾವಿನ ಫೋಟೋಗೆ ಪೂಜೆ ಮಾಡಿ.

★ ಹಳದಿ ಬಣ್ಣದ ಹೂವುಗಳು ಅಥವಾ ಹೂವಿನ ಹಾರ ಹಾಕಿ, ದೀಪ ಗಂಧದ ಕಡ್ಡಿ ಹಚ್ಚಿ, ಪ್ರಸಾದ ನೈವೇದ್ಯ ಮಾಡಿ, ಎಲ್ಲರಿಗೂ ಹಂಚಿ ಸಾಯಿಬಾಬಾವನ್ನು ಪ್ರಾರ್ಥಿಸಿ.

★ ಸಾಯಿ ವ್ರತದ ಕಥೆ, ಸಾಯಿ ಸ್ಮರಣೆ, ಸಾಯಿ ನಾಮಾರ್ಪಣೆ, ಸಾಯಿ ವಂದನೆ, ಸಾಯಿ ಬಾವನಿ ಇವುಗಳನ್ನು ಭಕ್ತಿಯಿಂದ ಓದಿರಿ.

★ 9ನೇ ಗುರುವಾರ 5 ಬಡವ ಜನರಿಗೆ ಅನ್ನದಾನ ಮಾಡಿ.

★ 9ನೇ ಗುರುವಾರ ಈ ಸಾಯಿ ವ್ರತ ಪುಸ್ತಕಗಳನ್ನು 5, 11, ಅಥವಾ 21 ಉಚಿತವಾಗಿ ಹಂಚಬೇಕು.

ಕೆಲವು ದಿನಗಳ ನಂತರ ಸೂರತ್‌ನಿಂದ ಅವರ ಮೈದುನನ ಹೆಂಡತಿ ಕೋಕಿಲಗೆ ಪತ್ರ ಬರೆದರು. ಅದರಲ್ಲಿ ಅವರ ಮಕ್ಕಳು ಸಾಯಿ ವ್ರತ ಮಾಡುತ್ತಾರೆ. ಆದ್ದರಿಂದ ಚೆನ್ನಾಗಿ ಓದಲು ಪ್ರಾರಂಭಿಸಿದ್ದಾರೆ ಎಂದು ತಿಳಿಸಿದ್ದರು. ಈ ವ್ರತವನ್ನು ತಾನು ಸಹ ಮಾಡಿ, ಅವರ ಕಛೇರಿಯಲ್ಲಿಯು ಪ್ರಸಾರ ಮಾಡಿ, ಸಾಯಿ ವ್ರತ ಪುಸ್ತಕಗಳನ್ನು ಹಂಚಿದ್ದಾರೆ ಎಂದು ಬರೆದಿದ್ದರು. ಅವರ ಗೆಳತಿ ಚಾರುಮತಿ ಎಂಬುವರ ಮಗಳಿಗೆ ಸಾಯಿ ವ್ರತದ ಫಲವಾಗಿ ಮದುವೆ ಆಯಿತು. ಅವರ ಪಕ್ಕದ ಮನೆಯಲ್ಲಿರುವವರ ಆಭರಣಗಳು ಕಳೆದು ಹೋದವು. ಅವರು ಕೂಡ ಸಾಯಿ ವ್ರತ ಮಾಡಿದರು. 2 ತಿಂಗಳ ನಂತರ ಆ ಆಭರಣಗಳನ್ನು ವಾಪಸ್ ಪಡೆದರು. (ಯಾರು ವಾಪಸ್ ಇಟ್ಟರು ಎಂಬುದು ಗೊತ್ತಿಲ್ಲ) ಈ ತರಹ ಬಹು ಅದ್ಭುತಗಳು ನಡೆದವು. ಕೋಕಿಲಳ ಈ ವ್ರತದ ಮಹಿಮೆಯನ್ನು ಇನ್ನೂ ಚೆನ್ನಾಗಿ ತಿಳಿದುಕೊಂಡರು. ಸಂಪೂರ್ಣವಾದ ನಂಬಿಕೆಯನ್ನು ಬೆಳೆಸಿಕೊಂಡರು. ''ಓ ಸಾಯಿ, ಎಲ್ಲರಿಗೂ ತೋರುವ ಈ ಕರುಣೆಯನ್ನು ನನಗೂ ಸಹ ತೋರಿ ಆಶೀರ್ವಾದ ಮಾಡಿ''.

## ಶ್ರೀ ಸಾಯಿಬಾಬಾರವರ 11 ಪ್ರಮಾಣಗಳು

1. ಶಿರಡಿಯಲ್ಲಿ ಕಾಲಿಡುವ ಭಕ್ತನಿಗೆ ಬರುವ ಆಪತ್ತು ದೂರಾಗುತ್ತದೆ.
2. ನನ್ನ ಸಮಾಧಿಯ ಮೆಟ್ಟಿಲು ಹತ್ತುವವನ ಎಲ್ಲ ದುಃಖಗಳನ್ನು ದೂರ ಮಾಡುತ್ತೇನೆ.
3. ಈ ಜಗತ್ತಿನಿಂದ ನನ್ನ ಶರೀರ ಮರೆಯಾದರೂ ಭಕ್ತರು ಕರೆದರೆ ಓಡಿ ಬರುವೆನು.
4. ದೃಢ ಭಕ್ತಿ, ನಂಬಿಕೆ, ವಿಶ್ವಾಸದಿಂದ ಯಾಚುವವನ ಆಸೆಯನ್ನು ಸಮಾಧಿ ಪೂರ್ತಿ ಮಾಡುತ್ತದೆ.
5. ನಾನಿನ್ನೂ ಜೀವಿತವಾಗಿದ್ದೇನೆ ಎಂದು ನಂಬಿ, ಇದನ್ನು ಸತ್ಯವೆಂದು ನಿಮ್ಮ ಅನುಭವ ಹೇಳುತ್ತದೆ.
6. ನನ್ನ ಶರಣಾಗತನು ಯಾರಾದರೂ ಖಾಲಿ ಕೈಯೊಡನೆ ಹಿಂದಿರುಗಿದ್ದರೆ ಅವನನ್ನು ನನಗೆ ತೋರಿಸಿ.
7. ಭಕ್ತರು ನನ್ನನ್ನು ಎಂತಹ ಭಕ್ತಿಯಿಂದ ಭಾವಿಸುತ್ತಾರೋ ಅಂತಹ ಅನುಭವಗಳನ್ನು ಅವರಿಗೆ ಕೊಡುತ್ತೇನೆ.
8. ಎಂದಿಗೂ ನಿಮ್ಮ ಭಾರಗಳು ನನ್ನ ಮೇಲಿರುತ್ತದೆ. ಈ ನನ್ನ ವಚನ ಸುಳ್ಳು ಆಗುವುದಿಲ್ಲ.
9. ನೀವು ಕೇಳಿದ್ದೆಲ್ಲವೂ ನಾನು ಕೊಡುತ್ತೇನೆ. ನನ್ನ ಸಹಾಯ, ಆಶೀರ್ವಾದವನ್ನು ಎಂದಿಗೂ ನಿಮಗೆ ಇಲ್ಲ ಎಂದು ಹೇಳುವುದಿಲ್ಲ.
10. ಭಕ್ತಿಯಿಂದ ನನ್ನ ಮಾತುಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವವನಿಗೆ ನಾನು ಋಣಿಯಾಗುತ್ತೇನೆ.
11. ನನ್ನ ಶರಣಾದ ಭಕ್ತ ಭಾಗ್ಯವಂತನಾಗುತ್ತಾನೆ.

★ ★ ★

## ಸಾಯಿ ವ್ರತದಿಂದ ಉಂಟಾದ ಹಲವಾರು ಅದ್ಭುತ ಮಹಿಮೆಗಳು

ಈ ವ್ರತ ಪುಸ್ತಕವನ್ನು ಮೊಟ್ಟ ಮೊದಲು ಗುಜರಾತಿ ಭಾಷೆಯಲ್ಲಿ ಬರೆದ ನಿಶಾ ಜಾನಿ ಅವರ ಸ್ವಂತ ಅನುಭವದಿಂದ ಅವರು ಬರೆಯುತ್ತಾರೆ.

## ಮಂಡಿ ನೋವು ಆಶ್ಚರ್ಯದಿಂದ ಮರೆಯಾದ ಕಥೆ

ಯಾವ ರೋಗವಾದರೂ ಸರಿ, ಸಾಯಿ ನಾಮವನ್ನು ಜಪಸಿದರೆ, ರೋಗದ ತೀವ್ರ ಮತ್ತು ನೋವು ಕಡಿಮೆಯಾಗುತ್ತದೆ. ಕೆಲವೇ ದಿನಗಳಲ್ಲಿ ರೋಗ ಪೂರ್ಣವಾಗಿ ವಾಸಿಯಾಗುತ್ತದೆ.





''ನನಗೆ ಕಾಲು ಮಂಡಿಗಳಲ್ಲಿ ತುಂಬ ನೋವಿತ್ತು. ಕೆಲವು ದಿನಗಳ ಹಿಂದೆ ಮೂಳೆ ಮುರಿದು ಹೋಗಿತ್ತು. ಆದ್ದರಿಂದ ಮೂಳೆಯ ಕೆಲವು ತುಂಡುಗಳು ಬೇರಾಗಿ ಮಂಡಿಯನ್ನು ಅಮಿಕಿ ನೋವು ಕೊಡುತ್ತಾ ಇತ್ತು. ಡಾಕ್ಟರ್ ಆಪರೇಶನ್ ಮಾಡಬೇಕೆಂದು ಹೇಳಿದರು. ಆದರೆ ಅದಕ್ಕೆ ನಾನು ಒಪ್ಪಲಿಲ್ಲ. ಕೆಲವು ದಿನಗಳಲ್ಲಿ ನೋವು ಸರಿಯಾಯಿತು. ಅನಂತರ ದಿಡೀರೆಂದು ಮಂಡಿಯಲ್ಲಿ ನೋವು ಪ್ರಾರಂಭವಾಯಿತು. ಆರು ದಿನಗಳು ಒಂದಡಿಯೂ ಇಡುವುದಕ್ಕಾಗಲಿಲ್ಲ. ಸಹಿಸಿಕೊಳ್ಳಲಾಗದ ನೋವಿತ್ತು. ರಜಕ್ಕೆ ಎಲ್ಲರೂ ಶಿರಡಿ ಮತ್ತು ರಾಜಾಸ್ಥಾನಕ್ಕೆ ಹೋಗುವುದೆಂದು ತೀರ್ಮಾನವಾಯಿತು. ಆದರೆ ಎಲ್ಲರೊಡನೆ ನಾನು ಹೋಗಲು ಸಾಧ್ಯವಾಗಲಿಲ್ಲ ಎಂದಾಯಿತು. ಕಾಲು ಮಂಡಿ ನೋವಿನಿಂದ ತುಂಬ ತೊಳಲಾಡಿದೆ ಅಷ್ಟು ನೋವಿತ್ತು.

ನನಗೆ ಸಾಯಿ ಬಾಬಾ ಮೇಲೆ ತುಂಬ ಭಕ್ತಿಯಿತ್ತು. ವ್ರತವನ್ನೂ ಆಗಾಗಿ ಮಾಡಿದ್ದೇನೆ. ಆದರೆ ನಿಯಮದಿಂದ ಈ ವ್ರತ ಪೂಜೆ ಕಥೆಯನ್ನು ಓದುವುದು ಯಾವುದೂ ಮಾಡಿರಲಿಲ್ಲ. ನನ್ನ ಬಂಧು ಒಬ್ಬರು 9 ಗುರುವಾರದ ವ್ರತ ಮಹಿಮೆ ಮತ್ತು ನಿಯಮಗಳನ್ನು ನನಗೆ ತಿಳಿಸಿದರು. ನನಗೂ ಈ ವ್ರತ ಮಾಡಬೇಕೆಂದು ಆಸೆಯಾಯಿತು. ನಾನು ಧೈರ್ಯ ಮಾಡಿ ಸ್ಕೂಟರ್‌ನಲ್ಲಿ ಕುಳಿತು ಸಾಯಿ ಬಾಬಾರವರ ಮಂದಿರಕ್ಕೆ ಹೋದೆ. ಸಾಯಿ ಬಾಬಾವಿಗೆ ಪ್ರಾರ್ಥನೆ ಮಾಡಿದೆ. ನಾನು ಶಿರಡಿ, ರಾಜಸ್ತಾನ್ ಹೋಗಬೇಕು. ಈ ನೋವಿನ ವೇದನೆ ಸಹಿಸಲಾರದೆ ತುಂಬ ಕಷ್ಟಪಡುತ್ತಾ ಇದ್ದೇನೆ. ನಾನು ಈ ದೇವಸ್ಥಾನದ ಹೊಸ್ತಿಲನ್ನು ದಾಟುವುದಕ್ಕಿಂತ ಮುಂಚೆ ನನ್ನ ಮಂಡಿ ನೋವು ಸರಿಯಾದರೆ ನಾನು 9 ಗುರುವಾರಗಳ ವ್ರತ, ಉದ್ಯಾಪನೆ, ನಿಯಮದಿಂದ ಮಾಡುವೆನು ಎಂದು ಸಾಯಿ ಬಾಬಾವಿಗೆ ಪ್ರಾರ್ಥನೆ ಮಾಡಿದೆ.

ಏನು ಆಶ್ಚರ್ಯ? ನನ್ನ ಜೀವನದಲ್ಲಿ ಇಂತಹ ಅನುಭವವೋ, ಅದ್ಭುತವೋ ಇಲ್ಲ ಪವಾಡವೋ ಎಂದಿಗೂ ನಾನು ಅನುಭವಿಸಿರಲಿಲ್ಲ. ದೇವಸ್ಥಾನದ ಬಾಗಿಲ ಹತ್ತಿರ ಬಂದೊಡನೆ ನನ್ನ ಮಂಡಿ ನೋವು ಮಾಯವಾದಂತೆ ಕಾಣೆಯಾಯಿತು. ನಾನು ಆನಂದದಿಂದ, ಖುಷಿಯಿಂದ ಕುಣಿದೆನು. ಅನಂತರ 15 ದಿನಗಳು ಶಿರಡಿ, ರಾಜಸ್ತಾನ್‌ಗೆ ಎಲ್ಲರೊಡನೆ ಹೋಗಿ ಬಂದೆ. ತುಂಬ ನಡೆದೆ. ಸಾಯಿ ಕೃಪೆಯಿಂದ ಬೆಟ್ಟವನ್ನೇ ಹತ್ತಿದೆ. ಮಂಡಿ ನೋವು ಸ್ವಲ್ಪವೂ ಕಾಣಲಿಲ್ಲ.

★ ★ ★

## ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದ ಅನುಭವ

ಹೇತಲ್ ಎಂಬ ಹುಡುಗಿ ಶಾಲೆಯಲ್ಲಿ ಓದುತ್ತಿದ್ದಳು. ಅವಳಿಗೆ ಓದುವುದರಲ್ಲಿ ಗಮನ ಹರಿಸಲಾಗಲಿಲ್ಲ. ಒಂಭತ್ತನೇ ಇಯತ್ತಿಯನ್ನು ಹೇಗೋ ಪಾಸಾದಳು.

ತನಗೆ ಓದಿದ್ದು ಯಾವದೂ ಜ್ಞಾಪಕದಲ್ಲಿರುವುದಿಲ್ಲ ಎಂದು ತಮ್ಮ ತಾಯಿ ತಂದೆಯವರ ಹತ್ತಿರ ಹೇಳಿದಳು. ಅವರು ತುಂಬ ಚಿಂತಿತರಾದರು. ಹತ್ತನೇ ಕ್ಲಾಸ್ ಹೇಗೆ ಪಾಸಾಗುತ್ತಾಳೋ ಎಂದು ತುಂಬ ಯೋಚಿಸಿದರು. ಹತ್ತನೆ ಕ್ಲಾಸಿನಲ್ಲಿ ಶಾಲೆಯಲ್ಲಿ ನಡೆಸಿದ್ದ ತ್ರೈಮಾಸಿಕ, ಅರ್ಧ ವಾರ್ಷಿಕ ಪರೀಕ್ಷೆಯಲ್ಲಿ ನಪಾಸಾಗಿ ಬಿಟ್ಟಳು. ಪರಿಚಯಸ್ಥರು ಒಬ್ಬರು ಹೇಳಿದ ನಂತರ 9 ಗುರುವಾರಗಳ ವ್ರತವನ್ನು ಪ್ರಾರಂಭಿಸಿದಳು. ಹೇತಲಿನ ಜ್ಞಾಪಕ ಶಕ್ತಿ ಜಾಸ್ತಿಯಾಯಿತು. ಯಾವ ಗುರುಗಳು ಅವಳನ್ನು ಬೈದಿದ್ದರೋ, ಅವರೇ ಅವಳನ್ನು ಹೊಗಳಲು ಪ್ರಾರಂಭಿಸಿದರು. ಸಾಯಿ ಬಾಬಾವಿನ ಅದ್ಭುತ ಮಹಿಮೆಯಿಂದ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಶೇಕಡ 75 ತೆಗೆದುಕೊಂಡು ಎಲ್ಲರನ್ನೂ ಸಂತೋಷಪಡಿಸಿದಳು.

★ ★ ★

## ಮಾಯದಂತೆ ಮರೆಯಾದ ಗುಳ್ಳೆ

ಜಲ್ಪಾ ಎಂಬ ಹೆಂಗಸಿಗೆ ಕಿವಿಯಲ್ಲಿ ನೋವು ಜಾಸ್ತಿಯಾಗಿ ಅವಳಿಗೆ ಕಿವಿ ಕೇಳುವ ಶಕ್ತಿ ಕಡಿಮೆಯಾಯಿತು. ಒಂದು ಸ್ಪೆಶಲಿಸ್ಟ್ ವೈದ್ಯರು ಅವಳಿಗೆ ಪರೀಕ್ಷಿ ಮಾಡಿ, ಕಿವಿಯ ಹಿಂಭಾಗದಲ್ಲಿ ಒಂದು ಗುಳ್ಳೆ ಇದೆ ಎಂದು ಹೇಳಿದರು. ಅನಂತರ ಕೆಲವು ಟೆಸ್ಟ್‌ಗಳನ್ನು ಮಾಡಿ ಆಪರೇಷನ್ ಮಾಡಲೇಬೇಕು ಎಂದು ತಿಳಿಸಿದರು. ಅದಕ್ಕೆ ಬಯಾಪ್ಸಿ ಮಾಡಬೇಕು ಎಂದು ಹೇಳಿ ರೋಗದ ಹೆಸರನ್ನೂ ತಿಳಿಸಿದರು. ಅವಳ ಮನೆಯಲ್ಲಿ ಅದನ್ನು ಕೇಳಿ ಎಲ್ಲರೂ ಹೆದರಿ ಚಿಂತೆಗೊಂಡರು. ಡಾಕ್ಟರು 15 ದಿನಗಳ ನಂತರ ಆಪರೇಷನಿಗೆ ದಿನವನ್ನು ನಿಶ್ಚಯಿಸಿದರು.

ಆ ಸಮಯದಲ್ಲಿ ಜಲ್ಪಾ 9 ಗುರುವಾರಗಳ ವ್ರತವನ್ನು ಪ್ರಾರಂಭಿಸಿದರು. ಈ ವ್ರತ ಪೂರ್ತಿ ಮಾಡಿದ ನಂತರವೇ ಆಪರೇಷನ್ ಎಂದು ಹಠ ಹಿಡಿದರು. 9ನೇ ಗುರುವಾರ ಬಡವರಿಗೆ ಅನ್ನದಾನ ಮಾಡಿ, ಸಾಯಿ ವ್ರತದ ಪುಸ್ತಕಗಳನ್ನೂ ಹಂಚಿದರು. ಆಸ್ಪತ್ರೆಗೆ ಹೋಗಿ ಹಲವಾರು ಟೆಸ್ಟುಗಳನ್ನೂ ಮಾಡಿಸಿಕೊಂಡರು. ಎಲ್ಲ ಟೆಸ್ಟ್ ರಿಪೋರ್ಟ್‌ಗಳು ನಾರ್ಮಲ್ ಎಂದು ಬಂತು. ಗುಳ್ಳೆಯು ಮರೆಯಾಯ್ತು. ಡಾಕ್ಟರೂ ಸಹ ''ಎಲ್ಲ ಸರಿಯಾಗಿದೆ. ಆಪರೇಶನ್ನಿನ ಅವಶ್ಯಕತೆ ಇಲ್ಲ'' ಎಂದು ಹೇಳಿದರು. ಸಾಯಿ ಬಾಬಾವಿನ ಮೇಲೆ ಜಲ್ಪಾ ಇಟ್ಟುಕೊಂಡಿದ್ದ ಭಕ್ತಿ ಮತ್ತು ನಂಬಿಕೆ ಇನ್ನೂ ಹೆಚ್ಚಾಯಿತು.

★ ★ ★

## ದೊಡ್ಡ ಅಪಘಾತದಿಂದ ಪಾರು

ರಮೇಶ್ ಎಂಬವರ ಹೆಂಡತಿಗೆ ಆಗಾಗ ಮೂಲ ರೋಗದ ವೇದನೆ ಕಾಡುತ್ತಿತ್ತು. ಅವರು ಆ ಸಮಯದಲ್ಲಿ 'ಹರಡೆ' ಎನ್ನುವ ಔಷಧಿಯನ್ನು ಬಿಸಿ





ನೀರೊಡನೆ ಕುಡಿಯುತ್ತಿದ್ದರು. ಒಂದು ದಿನ 'ಹರಡೆ' ತೆಗೆದುಕೊಂಡು ಅದರ ಜೊತೆ ಗಾಜಿನ ಗ್ಲಾಸಿನಲ್ಲಿದ್ದ ಬಿಸಿ ನೀರನ್ನು ಕುಡಿದರು. ಕುಡಿದ ಮೇಲೆ ಆ ಗಾಜಿನ ಗ್ಲಾಸು ಒಡೆದು ಹೋಗಿದ್ದನ್ನು ಗಮನಿಸಿದರು. ಗಾಜಿನ ತುಂಡು ತಮ್ಮ ಹೊಟ್ಟೆಯೊಳಗೆ ಹೋಗಿರತ್ತೋ ಎಂದು ಅವರಿಗೆ ಅನುಮಾನ ಬಂತು. ಆ ಗಾಜಿನ ತುಂಡನ್ನು ಮನೆಯಲ್ಲಿ ಹುಡುಕಿದರು. ಎಲ್ಲೂ ಸಿಗಲಿಲ್ಲ. 2 ಗಂಟೆ ಕಾಲಗಳ ನಂತರ ಮಲದ ಜೊತೆ ರಕ್ತ ಸುರಿಯುವುದಕ್ಕೆ ಪ್ರಾರಂಭವಾಯಿತು. ನಿಲ್ಲಲೇ ಇಲ್ಲ. ಅವರು ತುಂಬ ಸುಸ್ತಾಗಿ ಜ್ಞಾನ ತಪ್ಪಿ ಬಿದ್ದರು. ಅವಳ ಗಂಡ ರಮೇಶ್ ತುಂಬ ಹೆದರಿಬಿಟ್ಟರು. ಆಗ ಸಮಯ ರಾತ್ರಿ 1 ಗಂಟೆ.

ರಮೇಶ್ ಸಾಯಿ ಬಾಬಾವಿನ ಫೋಟೋ ಮುಂದೆ ನಿಂತು ಆತ್ಮೀಯವಾಗಿ ಬೇಡಿಕೊಂಡರು. ತಮ್ಮ ಹೆಂಡತಿಗೆ ರಕ್ತ ಸುರಿವುದು ನಿಂತು ಬದುಕಿ ಬಿಟ್ಟರೆ, 9 ಗುರುವಾರದ ವ್ರತವನ್ನು ನಿಯಮದಂತೆ ಪಾಲಿಸುವನೆಂದು ಪ್ರಾರ್ಥನೆ ಮಾಡಿಕೊಂಡರು. ಸ್ವಲ್ಪ ಸಮಯದಲ್ಲಿಯೇ ಮಲದ ಜೊತೆ ಗಾಜಿನ ತುಂಡೂ ಹೊರಗೆ ಬಂದುಬಿಟ್ಟತು!. ರಕ್ತ ಸುರಿಯುವುದು ನಿಂತು ಹೋಯಿತು. ಆ ಕ್ಷಣವೇ ಡಾಕ್ಟರ ಹತ್ತಿರ ಕರೆದುಕೊಂಡು ಹೋದರು. ಡಾಕ್ಟರ್ ಟೆಸ್ಟುಗಳನ್ನು ಮಾಡಿ ಏನು ಅಪಾಯವಿಲ್ಲ ಎಂದು ತಿಳಿಸಿದರು. ಒಂದು ವಾರದಲ್ಲಿಯೇ ರಮೇಶ್‌ರ ಹೆಂಡತಿ ವಾಸಿಯಾದರು. ರಮೇಶ್ ಅವರು ಸಾಯಿ ವ್ರತ ಮಾಡಿ ಮಹಿಮೆಯನ್ನು ಹೆಚ್ಚಿಸುವುದಕ್ಕಾಗಿ ಪುಸ್ತಕಗಳನ್ನು ಹಂಚಿದರು.

★ ★ ★

## ರದ್ದಾದ ವರ್ಗಾವಣೆ

ನೀಲಾ ಎಂಬುವಳು ಕಛೇರಿಯಲ್ಲಿ ಕೆಲಸ ಮಾಡುವ ಹೆಂಗಸು. ಅವರಿಗೆ ಅಹಮದಾಬಾದಿನಿಂದ ದೂರವಾದ ಕಚ್ಛ್ ಜಿಲ್ಲೆಗೆ ವರ್ಗಾವಣೆ ಆಯಿತು. ಸುದ್ಧಿ ತಿಳಿದು, ತಲೆ ಮೇಲೆ ಆಕಾಶ ಬಿದ್ದ ಹಾಗೆ ಆಯಿತು. ಒಂಟಿಯಾಗಿ ಮಗಳನ್ನು ಇಷ್ಟು ದೂರ ಹೇಗೆ ಕಳುಹಿಸುವುದು ಎಂಬ ಚಿಂತೆಯಿಂದ ನೀಲಾಳ ತಾಯಿ ಅಸ್ವಸ್ಥರಾದರು. ಪರಿಚಯ ಇರುವವರ ಮೂಲಕ ಅರ್ಜಿ ಹಾಕಿಯೂ ಏನು ಪ್ರಯೋಜನವಾಗಲಿಲ್ಲ. ಅನಂತರ ಇನ್ನೂ ನೋವಾಗುವ ತರಹ ಒಂದು ಆರ್ಡರ್ ಬಂತು. ಅದರಲ್ಲಿ ಇನ್ನೂ ಹತ್ತೇ ದಿನಗಳಲ್ಲಿ ಹೊಸ ಜಿಲ್ಲೆಯಲ್ಲಿ ಹಾಜರಾಗಬೇಕು, ಇಲ್ಲದಿದ್ದರೇ.ಕೆಲಸದಿಂದ ತೆಗೆದು ಬಿಡುತ್ತಾರೆ ಎಂದು ಬರೆದಿತ್ತು. ಇನ್ನೂ ದುಃಖವಾಯಿತು. ಆವತ್ತು ಗುರುವಾರ, ನೀಲಾಳ ಗೆಳತಿ ನಂದಿತಾ ಬೆಳಿಗ್ಗೆ ಅವರನ್ನು ನೋಡುವುದಕ್ಕಾಗಿ ಬಂದಿದ್ದರು. ನೀಲಾಳ ಪರಿಸ್ಥಿತಿ ನೋಡಿ, ಅವರು ಸಾಯಿಬಾಬಾವಿನ ಮೇಲೆ

ನಂಬಿಕೆ ಇಟ್ಟು 9 ಗುರುವಾರ ವ್ರತವನ್ನು ಮಾಡು ಎಂದು ಹೇಳಿದರು. ಆ ದಿನವೇ ನೀಲಾ 9 ಗುರುವಾರಗಳ ವ್ರತ ಪೂಜೆಯನ್ನು ಪ್ರಾರಂಭಿಸಿದರು. ಮೂರನೇ ದಿನವೇ ಅವರಿಗೆ ಒಂದು ಆರ್ಡರ್ ಸಿಕ್ಕಿತು. ಅವರ ಕಚ್ಚ್ ಜಿಲ್ಲೆಯ ವರ್ಗಾವಣೆ ರದ್ದಾಗಿ ಅಹಮದಾಬಾದಲ್ಲಿಯೇ ಬೇರೆ ಒಂದು ಬ್ರಾಂಚಿನಲ್ಲಿ ವರ್ಗಾವಣೆ ಆಗಿದೆ ಎಂದು ಬರೆದಿತ್ತು. ನೀಲಾಳ ಸಾಯಿ ಭಕ್ತಿ ಹೆಚ್ಚಾಯಿತು. 9 ಗುರುವಾರಗಳ ವ್ರತವನ್ನು ಕ್ರಮದಿಂದ ಪೂರ್ತಿ ಮಾಡಿ ಬಡವರಿಗೆ ಅನ್ನ ದಾನ ಮಾಡಿ, ಸಾಯಿ ವ್ರತದ ಪುಸ್ತಕಗಳನ್ನು ಹಂಚಿ ವ್ರತದ ಮಹಿಮೆಯನ್ನು ಪ್ರಸಾರ ಮಾಡಿದರು. ★ ★ ★

## ಮದುವೆ ಆಯಿತು

ಒಬ್ಬರು ಚೆನ್ನಾಗಿ ಓದಿ, ವಕೀಲರ ಕಛೇರಿಯಲ್ಲಿ ಕ್ಲರ್ಕ್ ಆಗಿದ್ದರು. ಮದುವೆ ವಯಸ್ಸು ದಾಟಿದರೂ ಅವರಿಗೆ ಒಳ್ಳೆಯ ವಧು ಸಿಗಲಿಲ್ಲ. ಅವರು ಸಾಯಿ ಬಾಬಾವಿನ ಮೇಲೆ ತುಂಬ ನಂಬಿಕೆ ಇಟ್ಟುಕೊಂಡಿದ್ದರು. ಆಗಾಗ ಬಾಬಾವಿನ ಮಂದಿರಕ್ಕೆ ಹೋಗಿ ಬರುತ್ತಿದ್ದರು. ಅವರ ಗೆಳೆಯರೊಬ್ಬರು ಅಪಾರವಾದ ಸಾಯಿ ಭಕ್ತರು. ಅವರು ಸಾಯಿ ವ್ರತ, ವ್ರತದ ನಿಯಮ, ಉದ್ಯಾಪನೆಯ ವಿಧಿಗಳನ್ನೂ ತಿಳಿಸಿದರು. ವಿಧಿಗಳಂತೆ ನಮ್ಮ ಗೆಳೆಯರು 9 ಗುರುವಾರಗಳ ಸಾಯಿ ವ್ರತವನ್ನು ಮಾಡಿ, ಸಾಯಿ ವ್ರತ ಪುಸ್ತಕಗಳನ್ನು ಹಂಚಿ ವ್ರತದ ಮಹಿಮೆಯನ್ನು ಹೆಚ್ಚಿಸಿದರು. ಅವರು ಒಳ್ಳೆಯ ಕೆಲಸದಲ್ಲಿರುವ ರೂಪವತಿ, ಗುಣವತಿಯಾದ ಹೆಣ್ಣನ್ನು ಹೆಂಡತಿಯಾಗಿ ಪಡೆದರು. ಇದು ಅವರು ಮಾಡಿದ ಸಾಯಿ ವ್ರತದ ಫಲವೇ. ★ ★ ★

## ಇನ್ನಷ್ಟು ಅದ್ಭುತಗಳು

★ ಒಬ್ಬ ಯುವಕ ಎಂ.ಕಾಂ. ವರೆಗು ಓದಿ ಕೆಲಸವಿಲ್ಲದೆ ಪರದಾಡುತ್ತಿದ್ದರು. ಅವರು ಮತ್ತು ಅವರ ತಾಯಿ 9 ಗುರುವಾರಗಳ ವ್ರತ ಮಾಡಿದರು. ವ್ರತದ ಉದ್ಯಾಪನೆ ನಿಯಮ ಪ್ರಕಾರ ಮಾಡಿ ಪೂರ್ತಿ ಮಾಡಿದರು. ಕೆಲವೇ ದಿನಗಳಲ್ಲಿ ಒಳ್ಳೆಯ ಕೆಲಸ ಒಂದರಲ್ಲಿ ಅವರು ಸೇರಿಕೊಂಡರು.

★ ಒಬ್ಬ ಕಲಾವಿದರ ಕುಟುಂಬ. ಅವರು ಕಲೆ ವಿದ್ಯೆ ಮೂಲಕ ಪಡೆದ ಆಧಾರದಿಂದಲೆ ಜೀವನ ನಡೆಯುತ್ತಿತ್ತು. ಅವರಿಗೆ, ನಾಟಕ, ಟಿ.ವಿ. ಮುಂತಾದವುಗಳಲ್ಲಿ ಅವಕಾಶ ಸಿಗಲಿಲ್ಲ. 9 ಗುರುವಾರಗಳ ವ್ರತ ಮಾಡಿದರು. ಕೂಡಲೇ, ಅವರಿಗೆ ಒಳ್ಳೆಯ ಅವಕಾಶ ಸಿಕ್ಕಿತು. ಗುಜರಾತಿನ ಚಲನಚಿತ್ರಗಳು, ಟಿ.ವಿ. ನಾಟಕಗಳಲ್ಲಿಯೂ ಮುಖ್ಯವಾದ ಪಾತ್ರಗಳು ಸಿಕ್ಕಿದವು. ಅವರ ಕುಟುಂಬದಲ್ಲಿಯೂ ಆನಂದ, ಸಂಪತ್ತು ತುಂಬಿತು.





★ ಒಬ್ಬ ಗೆಳೆಯರು ವ್ಯಾಪಾರದಲ್ಲಿ ನಷ್ಟವಾಗಿ ಆಧಾರವಿಲ್ಲದ ಸ್ಥಿತಿಯಲ್ಲಿದ್ದರು. 9 ಗುರುವಾರಗಳ ವ್ರತ ಮಾಡಿದರು. ವ್ರತದ ಮಹಿಮೆಯಿಂದ ವ್ಯಾಪಾರದಲ್ಲಿ ಒಳ್ಳೆಯ ಆಧಾರವನ್ನು ಪಡೆದರು.

★ ಅಮೆರಿಕಾದಲ್ಲಿ ಮಗನಿಗೆ ಮೆಡಿಕಲ್ ಅಡ್ಮಿಷನ್ ಸಿಗದೆ ಒಬ್ಬ ಹೆಂಗಸು ಕಷ್ಟಪಟ್ಟರು. ಸಾಯಿ ವ್ರತದ ಪುಸ್ತಕ ಅವರ ಕೈಗೆ ಹೇಗೋ ಸೇರಿತು. ಅವರೂ 9 ಗುರುವಾರಗಳ ವ್ರತವನ್ನು ಮಾಡಿದರು. ಆಶ್ಚರ್ಯಪಡುವಂತಹ 3ನೇ ಗುರುವಾರವೇ ಅವರ ಮಗನಿಗೆ ಅಮೆರಿಕಾದಲ್ಲಿ ಮೆಡಿಕಲ್ ಅಡ್ಮಿಷನ್ ಸಿಕ್ಕಿತು.

## ಅತ್ಯಾಶ್ಚರ್ಯ !!

## ಮದುವೆಯಾಗಿ 18 ವರ್ಷಗಳ ನಂತರ ಹೆಣ್ಣು ಮಗು ಹುಟ್ಟಿತು

ಮಹೇಂದ್ರನ್, ರೇಖಾ ದಂಪತಿಯರಿಗೆ ಮದುವೆಯಾಗಿ 18 ವರ್ಷಗಳಾಗಿದ್ದರೂ ಮಕ್ಕಳಾಗಲಿಲ್ಲ. ರೇಖಾಳ ಅತ್ತೆಯ ಮನೆಯಲ್ಲಿರುವವರು ಹಲವಾರು ಮಾತುಗಳನ್ನಾಡಿ ಅವರನ್ನು ನೋಯಿಸಿದರು. ಎಷ್ಟು ಚಿಕಿತ್ಸೆಯನ್ನು ಮಾಡಿಯೂ ಫಲವಿರಲಿಲ್ಲ. ಎಷ್ಟೋ ಪರಿಹಾಸಗಳನ್ನು ಕೂಡ ಮಾಡಿದರು. ಅವರು ರಾಜ್ಯದ ಕಛೇರಿಯಲ್ಲಿ ಉದ್ಯೋಗ ಮಾಡುತ್ತಿದ್ದರು. ಅವರ ಕಛೇರಿಯಲ್ಲಿ ಕೆಲಸ ಮಾಡುವ ಸುರೇಶ್ ಎಂಬವರು ಒಂದು ದಿನ ಎಲ್ಲರಿಗೂ ಸಿಹಿ ತಿಂಡಿಗಳನ್ನು ಹಂಚಿದರು. ರೇಖಾ ಸುರೇಶ್‌ಗೆ ಕಾರಣ ಕೇಳಿದ್ದಕ್ಕೆ ಮದುವೆಯಾಗಿ 10 ವರ್ಷ ಕಾಲಗಳ ನಂತರ ಮಗು ಹುಟ್ಟಿದ್ದನ್ನು, ಮತ್ತು ತಾವು ತಮ್ಮ ಹೆಂಡತಿ ಇಬ್ಬರೂ ಸಹ ಸಾಯಿ ವ್ರತ ಮಾಡಿದ್ದನ್ನು ಹೇಳಿ, ಸಾಯಿ ಬಾಬಾವಿನ ಮಹಿಮೆಯನ್ನು ತಿಳಿಸಿ ರೇಖಾಳಿಗೂ 9 ಗುರುವಾರಗಳ ವ್ರತವನ್ನು ಮಾಡಲು ಹೇಳಿದರು. ಮಾರನೆ ದಿನವೇ ಸಾಯಿ ವ್ರತದ ಪುಸ್ತಕವನ್ನು ರೇಖಾಳಿಗೆ ಕೊಟ್ಟರು. ರೇಖಾಳೂ ಭಕ್ತಿಪೂರ್ವಕವಾಗಿ 9 ಗುರುವಾರಗಳ ವ್ರತ ಮಾಡಿ, ನಿಯಮಗಳಂತೆ ಉದ್ಯಾಪನೆ ಮಾಡಿದರು. ಸಾಯಿ ಬಾಬಾ ಅವರ ಮೇಲೆ ಕರುಣೆಗೊಂಡರು. ಮದುವೆಯಾಗಿ 18 ವರ್ಷಗಳ ನಂತರ ಸಾಯಿ ವ್ರತದ ಮಹಿಮೆಯಿಂದ ಅವರಿಗೆ ಒಂದು ಹೆಣ್ಣು ಮಗು ಹುಟ್ಟಿತು.

★ ★ ★



## ಸಾಯಿ ಪ್ರಾರ್ಥನೆ

ಗುರುವೆಂದು ನಿನ್ನನ್ನು ಸ್ಮರಿಸಿದೆ ಸಾಯಿನಾಥಾ
ನಿನ್ನ ದಯವನ್ನು ಕೊಡುವೆ ನೀ ನನಗೆ ಸಾಯಿನಾಥಾ
ನನ್ನ ಬಾಳಿಗೆ ದಾರಿ ತೋರುವ ದೇವಾ ಸಾಯಿನಾಥಾ
ಸುಖದುಃಖ ತುಂಬಿರುವ ಈ ಜಗತ್ತಿಗೆ ಬೆಳಕಾಗು ಸಾಯಿನಾಥಾ
ಪ್ರತಿ ಗುರುವಾರ ವ್ರತ ಮಾಡಿದ್ದೇನೆ ಸಾಯಿನಾಥಾ
ಲೋಕ ಇಚ್ಛೆಗಳಿಂದ ನನ್ನನ್ನು ಬಿಡಿಸು ಓ ಸಾಯಿನಾಥಾ
ವೆಂಕಟರಮಣನನ್ನು ನಿನ್ನಲ್ಲಿ ಕಂಡೆ ಸಾಯಿನಾಥಾ
ಭೂದೇವಿಯ ಪ್ರಿಯ ಪುತ್ರನೆ ಸಾಯಿನಾಥಾ
ನಿನ್ನ ಚರಿತೆಯನ್ನು ಓದಲು ದಯೆಮಾಡು ಸಾಯಿನಾಥಾ
ನಿನ್ನ ಕಮಲ ಪಾದಕ್ಕೆ ಶರಣಾಗಿದ್ದೇವೆ ಸಾಯಿನಾಥಾ
ನನಗೆ ಜಯವನ್ನು ಕೊಡು ಸಾಯಿನಾಥಾ ★ ★ ★

## ಸಾಯಿ ಸ್ಮರಣೆ

ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ
ಭಕ್ತರು ನಿಮ್ಮನ್ನು ಕರೆಯುತ್ತಾರೆ
ಇಚ್ಛೆ ನಮ್ಮದು ಈಡೇರಿಸು
ನಮ್ಮ ವಿಶ್ವಾಸ ಬೆಳೆಯಬೇಕು
ಬಾ ಸಾಯಿ ಬಾ ಸಾಯಿ

ದುಃಖ ವಿನಾಶ ಮಾಡು ಸಾಯಿ
ಆನಂದ ಕೊಡುವ ಬಾ ಸಾಯಿ
ನಿನ್ನ ಮಕ್ಕಳು ನಾವು ಕರೆಯುತ್ತೇವೆ
ತಾಯಿಯಂತೆ ದಯೆಗೊಂಡು ಬಾ ಸಾಯಿ
ಬಾ ಸಾಯಿ ಬಾ ಸಾಯಿ

ಕೀರ್ತನೆ ಸಾಯಿ ಪೂಜೆಯು ಸಾಯಿ
ಬಾಳೂ ಸಾಯಿ ಸಿದ್ಧಿಯು ಸಾಯಿ
ಆನಂದ ಸಾಯಿ ಸಂಪತ್ತು ಸಾಯಿ
ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ

ತೃಪ್ತಿ ಸಾಯಿ ಮುಕ್ತಿ ಸಾಯಿ
ಭೂಮಿ ಸಾಯಿ ಆಕಾಶ ಸಾಯಿ
ಶಾಂತಿ ಸಾಯಿ ಓಂ ಸಾಯಿ
ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ

ಶಿರಡಿವಾಸಿ ನಮ್ಮ ಸಾಯಿ
ಭಕ್ತರ ಮೆಚ್ಚಿನ ಗೆಳೆಯ ಸಾಯಿ
ಕರುಣಾ ಸಾಗರ ನಮ್ಮ ಸಾಯಿ

ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ

ಪೂರ್ವ ಸಾಯಿ ಪಶ್ಚಿಮ ಸಾಯಿ
ಉತ್ತರ ಸಾಯಿ ದಕ್ಷಿಣ ಸಾಯಿ
ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ

ಹಿಂದೂ ಸಾಯಿ ಮುಸ್ಲಿಮ್ ಸಾಯಿ
ಜೀವ ಸಾಯಿ ಯಾತ್ರ ಸಾಯಿ
ಯೇಸು ಸಾಯಿ ಗುರುನಾನಕ್ ಸಾಯಿ
ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಿಯ

ಧರ್ಮ ಸಾಯಿ ಕರ್ಮ ಸಾಯಿ
ಧ್ಯಾನ ಸಾಯಿ ದಾನ ಸಾಯಿ
ಇಲ್ಲೂ ಸಾಯಿ ಎಲ್ಲೆಲ್ಲೂ ಸಾಯಿ
ಬಾ ಸಾಯಿ ಬಾ ಸಾಯಿ

ಸತ್ಯಂ ಸಾಯಿ ಶಿವಂ ಸಾಯಿ
ಸುಂದರಂ ಸಾಯಿ ಈಶ್ವರ ಸಾಯಿ
ದಯಾಳು ಸಾಯಿ ಕರುಣಾಮಯಿ ಸಾಯಿ
ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ

ಶಕ್ತಿ ಸಾಯಿ ಭಕ್ತಿ ಸಾಯಿ
ಶಿವನು ಸಾಯಿ ವಿಷ್ಣು ಸಾಯಿ
ಬ್ರಹ್ಮ ಸಾಯಿ ಪಂಚಭೂತ ಸಾಯಿ
ಬಾ ಸಾಯಿ ಬಾ ಸಾಯಿ
ಬಾ ಸಾಯಿ ಬಾ ಸಾಯಿ ★ ★ ★





## ಶ್ರೀ ಸಾಯಿ ಬಾವನಿ

ಜಯ ಈಶ್ವರ ಜಯ ಸಾಯಿ ದಯಾಳು
ನೀನೇ ಜಗತ್ತಿನ ಕಾವಲುಗಾರ || 1 ||
ದತ್ತ ದಿಗಂಬರ ಪ್ರಭು ಅವತಾರ
ನಿನ್ನ ಕೈಯಲ್ಲಿ ಈ ಸಂಸಾರ || 2 ||
ಬ್ರಹ್ಮಾಚ್ಯುತ ಶಂಕರ ಅವತಾರ
ಶರಣಾಗಿರುವನ ಪ್ರಾಣಾಧಾರ || 3 ||
ದರ್ಶನ ನೀಡು ಓ ನನ್ನ ಪ್ರಭು
ಈ ಜೀವನದಿಂದ ನಮಗೆ ಮುಕ್ತಿ ಕೊಡು || 4 ||
ಹರಿದ ಕಫ್ನಿಯು ನಿನ್ನ ಬಟ್ಟೆಯಾಯಿತು
ಭಿಕ್ಷಾಪಾತ್ರೆ ನಿನ್ನ ಆಭರಣವಾಯಿತು || 5 ||
ಬೇವಿನ ವೃಕ್ಷವೇ ನಿನ್ನ ಮನೆಯಾಯಿತು
ಫಕೀರ ಧೋರಣೆ ನಿನ್ನ ರೂಪವಾಯಿತು || 6 ||
ಕಲಿಯುಗದಲ್ಲಿ ಅವತರಿಸಿದೆ
ಮುಗ್ಧ ಮನಸ್ಸಿನವರನ್ನು ನೀನುದ್ಧರಿಸಿದೆ || 7 ||
ಶಿರಡಿ ಎಂಬ ಊರಿನಲ್ಲಿ ವಾಸ ಮಾಡಿದೆ
ಜನರ ಮನಸ್ಸಿನಲ್ಲೂ ನೀನು ವಾಸ ಮಾಡಿದೆ || 8 ||
ಕೊಳಲೂದುವ ಕೃಷ್ಣನು ನೀನೇ
ಬಿಲ್ಲು ಹಿಡಿದ ಶ್ರೀರಾಮನು ನೀನೇ || 9 ||
ನಿನ್ನ ಕಣ್ಣಿನಲ್ಲಿ ಸಹಾ ದಯೆ ತುಂಬಿದೆ
ನೀನು ಆಡುವ ಮಾತು ಎಂದೂ ಅಮೃತಧಾರೆ || 10 ||
ಪುಣ್ಯ ಸ್ಥಳವಾಯಿತಲ್ಲ ದ್ವಾರಕಮಾಯಿ
ಅಲ್ಲಿ ಎಂದೂ ಇರುವವರೇ ನಮ್ಮ ಸಾಯಿ || 11 ||
ಬಾಬಾವಿನ ಧೂನಿ, ಅಲ್ಲಿ ಉರಿಯುತ್ತದೆ
ನಮ್ಮ ಪಾಪಗಳು ಅದರಲ್ಲಿ ಭಸ್ಮವಾಗುತ್ತವೆ || 12 ||
ದಾರಿ ತಪ್ಪಿದ ನಾನೊಬ್ಬ ಮೂರ್ಖ
ದೇವಾ! ನೀನೇ ನನ್ನ ಬಾಳಿನ ಮಾರ್ಗ || 13 ||
ಸಾವಿರಾರು ಜನರು ನಿನ್ನ ಬಳಿ ಬಂದರೂ
ಕರುಣಾಮೂರ್ತಿ ನೀನು ನನ್ನ ಮರೆಯಬೇಡ || 14 ||
ಮೂಲೆ ಶಾಸ್ತ್ರಿ ಎಂಬ ಅಗ್ನಿಹೋತ್ರಿಗೆ
ಗುರು ಗೋಲಪ್‌ಸ್ವಾಮಿ ರೂಪವ ತೋರಿಸಿದ್ದದು ಚಮತ್ಕಾರವೇ || 15 ||

ವಿಷದ ಹಾವು ಕಚ್ಚಿದ ಶಾಮಾಗೆ
ವಿಷವನ್ನಿಳಿಸಿ ಮತ್ತೆ ಬಾಳು ಕೊಟ್ಟವರೆ || 16 ||

ಪ್ರಳಯವನ್ನು ನಿನ್ನ ಮಾತಿನಲ್ಲಿ ನಿಲ್ಲಿಸಿದೆ
ಭಕ್ತರಿಗೆ ಜೀವ ಭಯ ಮುಕ್ತಿ ಕೊಟ್ಟೆ || 17 ||

ರುಬ್ಬುವ ಕಲ್ಲಲ್ಲಿ ಗೋದಿಯನ್ನು ಹಾಕಿ ರುಬ್ಬಿದೆ
ಗೋದಿಯ ಜೊತೆ ಕಾಲರಾನು ಪುಡಿಯಾಯಿತು || 18 ||

ನನ್ನ ಶಿರಸ್ಸು ನಿನ್ನ ಶರಣದಲ್ಲಿಡುತ್ತೇನೆ
ದಯೆ ತೋರುವ ನೀನು ಆ ಈಶ್ವರನೆ || 19 ||

ಮನಸ್ಸಿನ ಆಸೆಯನ್ನು ಪೂರ್ತಿ ಮಾಡು
ಭವಸಾಗರವನ್ನು ದಾಟುವ ಶಕ್ತಿ ನೀಡು || 20 ||

ಭಕ್ತ ಭೀಮಾಜಿ ತುಂಬ ರೋಗ ಕಂಡರು
ಬಹು ತರಹದ ಚಿಕಿತ್ಸೆ ಪಡೆದರು || 21 ||

ನಿನ್ನ ಪವಿತ್ರವಾದ ಉದಿ ತಿಂದೊಡನೆ
ಅವರ ಕ್ಷಯ ರೋಗ ಪೂರ್ಣವಾಗಿ ವಾಸಿಯಾಯಿತು || 22 ||

ಕಾಕಾಜಿ ನೋಡಿದರು ನಿನ್ನ ದಿವ್ಯರೂಪ
ತೋರಿಸಿದೆ ನೀನವರಿಗೆ ವಿಟ್ಠಲ ರೂಪ || 23 ||

ದಾಮುವಿಗೆ ವರ ಕೊಟ್ಟೆ ಸಂತಾನದ್ದು
ಅವರ ಮನಸ್ಸು ಅದರಲ್ಲಿ ಸಂತುಷ್ಟವಾಯಿತು || 24 ||

ಕೃಪಾನಿಧಿ ನನಗೆ ಕೃಪೆಯ ತೋರು
ದೀನದಯಾಳು ನನಗೆ ದಯೆ ನೀಡು || 25 ||

ಮೈ, ಮನಸ್ಸು ಪ್ರಾಣ ನಿನಗೆ ಅರ್ಪಿಸುವೆ
ಸಾಯಿ ಬಾಬಾ ಸದ್ಗತಿ ನೀಡು ನಮಗೆ || 26 ||

ಮೆಘಾ ನಿನ್ನನ್ನು ಗುರುತಿಸದೆ ನೀನೊಬ್ಬ
ಮುಸ್ಲಿಮ್ ಎಂದು ಮನದಲ್ಲಿ ನೆನೆದುಕೊಂಡರು || 27 ||

ನಿನ್ನಲ್ಲಿ ತೋರಿಸಿದ್ದೆ ಈಶ್ವರನನ್ನು
ಮೇಘಾ ತಿಳಿದು ಸೇರಿದ ನಿನ್ನ ಪರಮಪಾದವನ್ನು || 28 ||

ಎಣ್ಣೆಗೆ ಬದಲು ನೀರನ್ನು ಹಾಕಿ
ಹಚ್ಚಿಸಿ ಬೆಳಕು ಕೊಟ್ಟೆ ದೀಪಗಳಿಗೆ || 29 ||

ಅದನ್ನು ನೋಡಿದವರು ಮೈಮರೆತು ಹೋದರು
ಕೇಳಿದವರು ತಿಳಿದವರು ಆಶ್ಚರ್ಯಪಟ್ಟರು || 30 ||

ಕುದುರೆಯನ್ನು ಕಳೆದುಕೊಂಡ ಚಾಂದ್ ಪಾಟೀಲರು
ಎರಡು ತಿಂಗಳು ಮನಸ್ಸಿನಲ್ಲಿ ದುಃಖಗೊಂಡರು || 31 ||





ಸಾಯಿ ನೀನು ಅವರಿಗೆ ಕರುಣೆ ತೋರಿದೆ
ಕುದುರೆಯನ್ನು ಕಂಡುಹಿಡಿದು ಅವರಿಗೆ ಸೇರಿಸಿದೆ || 32 ||

ಶ್ರದ್ಧೆ, ತಾಳ್ಮೆ ಮನಸ್ಸಿನಲ್ಲಿ ಇಡು
ಸಾಯಿ ಸಾಯಿ ಎಂದು ದಿನ ದಿವ್ಯ ಜಪ ಮಾಡು || 33 ||

ಒಂಭತ್ತು ಗುರುವಾರಗಳ ವ್ರತ ಮಾಡು
ಜಯ ನಿನಗೆ ಖಂಡಿತ ಎಂದೆ ನೀನು || 34 ||

ತಾತ್ಯಾವಿನ ಪ್ರಾಣಕ್ಕೆ ಹಾನಿ ಆಗಿದ್ದಾಗ
ಕೊಟ್ಟೆ ನಿನ್ನ ಆಯುಷನ್ನು ಅವರಿಗೆ || 35 ||

ಪ್ರೀತಿಯಿಂದ ರೊಟ್ಟಿ ಕೊಟ್ಟಳು ಬಾಯಾಜ ಬಾಯಿ
ಅದನ್ನು ಕೊಟ್ಟುತಾತ್ಯಾವನ್ನು ಉಳಿಸಿದೆ ಓ ಸಾಯಿ || 36 ||

ಪಶುಪಕ್ಷಿಗಳಲ್ಲಿ ಪ್ರೀತಿಯನ್ನಿಟ್ಟೆ
ನಿನ್ನ ಪ್ರೀತಿಯಿಂದಲೆ ನಮಗೆ ರಾಜನಾದೆ || 37 ||

ಎಲ್ಲರ ಮೇಲೂ ನಿನ್ನ ಕರುಣೆಯ ತೋರು
ಆಗುತ್ತದೆ ನಿನ್ನ ಭಕ್ತರ ಕಷ್ಟ ಪಾರು || 38 ||

ನಿನ್ನ ಶರಣು ಸೇರಿದ ಭಕ್ತರನ್ನು
ಕಾಪಾಡಿ ಉದ್ಧರಿಸುವೆ ಕೊಟ್ಟು ಆಶ್ರಯವನ್ನು || 39 ||

ನಿನ್ನ ಹನ್ನೊಂದು ವಚನ ಅಮೃತಧಾರೆಯಂತಹವು
ಭಕ್ತರ ಕಷ್ಟವೆಲ್ಲ ದೂರಮಾಡುವಂತಹದು || 40 ||

ನಿಮ್ಮ ಲೀಲೆಗಳು ಅದ್ಭುತ ಪಾಠಗಳು
ನಿನ್ನನ್ನು ಮೆಚ್ಚಿಸುವುದಕ್ಕೆ ಹುಡುಕಿದೆ ಪದಗಳು || 41 ||

ನಾನು ಮೂರ್ಖ ನಿನ್ನನ್ನು ಹುಡುಕುತ್ತೇನೆ
ಎಲ್ಲ ಜೀವಗಳಲ್ಲೂ ನೀನು ತುಂಬಿರುವೆ || 42 ||

ದೀನದಯಾಳು ನೀನು ಕರ್ಣನಂತೆ ದಾತ
ನಾವೆಲ್ಲರೂ ಹಿಡಿವೆವು ನಿನ್ನ ಕಮಲ ಪಾದ || 43 ||

ಕೃಪೆ ತೋರೋ ಓ ನನ್ನ ಸಾಯಿ
ಶರಣಾದೆ ಎಂದಿಗೂ ನೀನೇ ನನ್ನ ತಾಯಿ || 44 ||

ಹಗಲು, ರಾತ್ರಿ ಎಂದೆಂದಿಗೂ ನಿತ್ಯವು
ಸಾಯಿ ನಾಮವೆ ಜಪಿಸಬೇಕು ನಾಲಿಗೆ ನಮ್ಮದು || 45 ||

ದೃಢ ಭಕ್ತಿಯಿಂದ ಹಾಡುವ ಭಕ್ತನು
ಖಂಡಿತ ಪರಮಪದ ಸೇರುವನು || 46 ||

ದಿನ ನಿತ್ಯ ಎರಡು ಹೊತ್ತು
ಸಾಯಿ ನಾಮ ಹೇಳುವ ಈ ಪದಗಳನ್ನು || 47 ||

ಹಾಡುವವನ ಕಾವಲುಗಾರನಾಗುತ್ತಾನೇ ಸಾಯಿ
ಅವರೇ ನಮ್ಮನ್ನು ಹೆತ್ತ ತಾಯಿ ॥ 48 ॥
ಸಾಯಿ ಲೀಲೆ ಹೇಳುವ ಈ ಪದಕಗಳು
ಹಾಡಿದ್ದೆಲ್ಲ ಅಮೂಲ್ಯ ರತ್ನಗಳು ॥ 49 ॥
ಶ್ರದ್ಧೆ, ತಾಳ್ಮೆಯಿಂದ ಸಾಯಿ ನಾಮ ಹಾಡುವೆ
ಕಷ್ಟಗಳು ದೂರಾಗಿ ಜಯಗೊಳ್ಳುವೆ ॥ 50 ॥
ಸಾಯಿಯೇ ಅಖಂಡ ಶಕ್ತಿಸ್ವರೂಪ
ಮನಸ್ಸು ಮೆಚ್ಚುವ ಅಂದದ ರೂಪ ॥ 51 ॥
ಶುಭ್ರವಾದ ಮನಸ್ಸಿನಿಂದ ಸ್ಮರಣೆ ಮಾಡು ಓ ಮನವೇ
ದಿನ ನಿತ್ಯ ಜಪಿಸು ಆ ಸಾಯಿ ನಾಮವೇ ॥ 52 ॥

ಅನಂತ ಕೋಟಿ ಬ್ರಹ್ಮಾಂಡ ನಾಯಕ ರಾಜಾಧಿರಾಜ
ಯೋಗಿ ರಾಜ ಪರಬ್ರಹ್ಮ ಶ್ರೀ ಸಚ್ಚಿದಾನಂದ ಸದ್ಗುರು
ಶ್ರೀ ಸಾಯಿನಾಥ್ ಮಹಾರಾಜ್ ಕೀ ಜಯ್

★ ಶ್ರೀ ಸದ್ಗುರು ಸಾಯಿ ನಾಥಾರ್ಪಣಮಸ್ತು, ಶುಭಂ ಭವತು
ಧುನಿ - ಬಾಬಾ ತಮ್ಮ ಮಸೀದಿಯಲ್ಲಿಟ್ಟಿದ್ದ ಪವಿತ್ರ ಅಗ್ನಿಕುಂಡ

★ ★ ★

## ಶ್ರೀ ದತ್ತಾತ್ರೇಯ ಬಾವನಿ

ಜಯ ಯೋಗೀಶ್ವರ ದತ್ತ ದಯಾಳಾ
ಜಗವನು ನಿರ್ಮಿಸಿದ ಮೂಲಾಧಾರ
ಅತ್ರಿಅನುಸೂಯಾ ನಿಮಿತ್ತ ಮಾಡಿ
ಜಗದ ಕಾರಣಕ್ಕೆ ಪ್ರಕಟವಾದೆ
ಬ್ರಹ್ಮಾ, ಹರಿ, ಹರನ ಅವತಾರ
ಶರಣಾದವರಿಗೆ ಪ್ರಾಣಾಧಾರ
ಅಂತರ್ಯಾಮಿ ಸಚ್ಚಿದಾನಂದಾ
ಪ್ರಸನ್ನ ಸದ್ಗುರು ದ್ವಿಭುಜವಂತ
ಅನ್ನಪೂರಣಿಯ ಝೋಲಿ ತೋಳಲ್ಲಿ ಹಾಕಿ
ಶಾಂತಿ ಕಮಂಡಲವನ್ನು ಕೈಯಲ್ಲಿಟ್ಟೆ
ನಾಲ್ಕಾರು ಹಲವು ತೋಳು ಹೊಂದಿದವನೇ
ಅನಂತಬಾಹು ನೀನು ನಿರ್ಧಾರನೆ
ನಿನ್ನ ಶರಣಾದೆ ಮೂರ್ಖ ನಾನೇ
ಪ್ರಾಣ ಹೋಗುತ್ತದೆ ಬಾ ದಿಗಂಬರ ನೀನೇ





ಅರ್ಜುನನ ಧ್ವನಿಯನ್ನು ಕೇಳಿದ ಕೂಡಲೇ
ಪ್ರಸನ್ನವಾದೆ ಸಾಕ್ಷಾತ್ ಅವನ ಮುಂದೆ
ಸಿದ್ಧಿ, ಋದ್ಧಿ, ಆನಂದ ಕೊಟ್ಟೆ
ಕೊನೆಗೆ ಪರಮಪದ ಮುಕ್ತಿಯ ಕೊಟ್ಟೆ
ಈವತ್ತು ಯಾಕೆ ಇಷ್ಟ ತಾಮಸ?
ನೀನಲ್ಲದೆ ನನಗೆ ಯಾರು ಆಶ್ರಯ?
ವಿಷ್ಣು ಭಕ್ತಿಯನ್ನು ಸ್ವೀಕರಿಸಿದೆ
ಅವನು ಕೊಟ್ಟ ಶ್ರಾದ್ಧ ಊಟ ಉಂಡು ರಕ್ಷಿಸಿದೆ
ಜಂಭದೇವ ಅಸುರನಿಂದ ದೇವರಿಗಾದ ಹಿಂಸೆ
ತಕ್ಷಣ ನೀ ದೇವರಿಗೆ ರಕ್ಷಣೆಯು ಕೊಟ್ಟೆ
ಮಾಯೆಯನ್ನು ಪ್ರಕಟಿಸಿ ಇಂದ್ರನ ಮೂಲಕವೇ
ದಿತಿಸುತನನ್ನು ಅಳಿಸಿ ವಧೆ ಮಾಡಿ ಲೀಲೆಗಳು ಮಾಡಿದೆ.
ಅವುಗಳನ್ನು ವರ್ಣಿಸುವುದಕಾಗುತ್ತದೆಯೋ ಶಿವರೂಪನೆ?
ನಿನ್ನ ಲೀಲೆಗಳಿಗೂ ಗೆರೆಯಿದೆಯೋ ಶಕ್ತಿಶೀಲನೆ!
ಕ್ಷಣದಲ್ಲಿ ಆಯುವಿನ ಪುತ್ರ ಶೋಕ ದೂರ ಮಾಡಿದೆ
ಮಗನನ್ನು ಪ್ರಾಣ ಕೊಟ್ಟು ಎಬ್ಬಿಸಿ ರಕ್ಷಣೆ ಮಾಡಿದೆ
ಸಾತ್ಯದೇವ, ಯದು, ಪ್ರಹ್ಲಾದ ಪರಶುರಾಮರಿಗೆ
ಬೋಧನೆ ಮಾಡಿದೆ ನೀನು ಜ್ಞಾನೋಪದೇಶವೆ
ಅಪಾರ ಕೃಪೆಯುಳ್ಳವನೇ, ದೇವಾ ನೀನು
ನನ್ನ ಮೊರೆಯನ್ನು ಕೇಳುವುದಿಲ್ಲವೆ?
ನಿನ್ನನ್ನು ಕಾಣದೆ ನಾನು ಸಹ
ಅಂತ ನೋಡಲಾರೆ ಬಾ ಈ ಕ್ಷಣ
ದ್ವಿಜಸ್ತ್ರೀಯ ಪ್ರೀತಿಯನ್ನು ಮೆಚ್ಚಿ
ಹುಟ್ಟಿದೆ ನೀನು ಅವಳ ಮಗನಂತೆ
ಸಮರ್ತುಗಾಮಿ, ಕಲಿಯುಗ ಕೃಪಾಳಾ
ನಿರಕ್ಷರೀ ಅಗಸನನ್ನು ಉದ್ಧರಿಸಿದೆ
ಹೊಟ್ಟೆ ನೋವುಂಡ ದ್ವಿಜವನ್ನು ರಕ್ಷಿಸಿದೆ
ವಲ್ಲಭಸೇನನ್ನು ಯಮನಿಂದ ಕಾಪಾಡಿದೆ
ನನ್ನ ಮೇಲೆ ನಿನಗೆ ಅಕ್ಕರೆಯಿಲ್ಲವೇ?
ನನ್ನನ್ನೂ ನೆನೆದುಕೋ ಒಂದು ಕ್ಷಣವೆ
ಒಣಗಿದ್ದ ವೃಕ್ಷವನ್ನು ಚಿಗುರಿಸಿದೆ

ನನ್ನಲ್ಲಿ ಮಾತ್ರ ಈ ಉದಾಸೀನ ಯಾಕೆ?
ತುಂಬಾ ಮೂಪ್ಪಿನ ಮಹಿಳೆಗೂ ಕೂಡ
ಮಗುವನ್ನು ಕೊಟ್ಟು ಆಶೀರ್ವದಿಸಿದೆ
ಅಂತಣನ ಕುಷ್ಠ ರೋಗವನ್ನು ನಿವಾರಿಸಿ
ಅವನ ಆಸೆಗಳನ್ನು ನೆರವೇರಿಸಿದೆ
ಕರು ಹಾಕದ ಎಮ್ಮೆಯಲ್ಲಿ ಕೂಡ ಹಾಲು ಸುರಿಸಿದೆ
ಅಂತಣನ ದರಿದ್ರವನ್ನು ತೊಲಗಿಸಿದೆ
ಅವರೆಕಾಯಿ ಭೀಕ್ಷೆಕೊಂಡು ಹಸಿವಿಗೆ
ಸ್ವರ್ಣ ಬಿಂದಿಗೆ ಕೊಟ್ಟೆ ದ್ವಿಜನಿಗೆ
ಬ್ರಾಹ್ಮಣನ ವಿಧವೆಯ ಕಣ್ಣೀರು ಒರಿಸಿ
ಅವನನ್ನು ಮೇಲೆಬ್ಬಿಸಿದೆ ಕರುಣೆಯಿಂದ ನೀನು
ಪಿಶಾಚಿ ಪೀಡೆಯನ್ನು ದೂರ ಮಾಡಿದೆ
ಗಂಗಾಧರನ ಮಗನನ್ನು ಮೇಲೆಬ್ಬಿಸಿದೆ
ಭಕ್ತ ದಂದುಕ್ ತನ್ನ ಇಷ್ಟ ಪ್ರಕಾರವೆ
ಸೇರಿದನು ಶ್ರೀಶೈಲ ನಿನ್ನ ಕೃಪೆಯಿಂದಲೇ
ಒಂದೆ ಸಮಯದಲ್ಲಿ ಕಂಡುಕೊಂಡ ಎಂಟು ಸ್ವರೂಪವೇ
ಬಹುರೂಪವು, ಅರೂಪವು ನೀನೆ ಅಲ್ಲವೆ?
ದರ್ಶನ ಮಾಡಿದ ನಿನ್ನ ಭಕ್ತರೆಲ್ಲರೂ
ಆನಂದ ಸುಖ ಸಂತೋಷ ಕೊಂಡರು
ಯವನರಾಜನ ವೇದನೆಯನ್ನು ಕಳೆದೆ
ಜಾತಿ ಮತ ಪಂಥ ಭೇದ ನಿನಗಿಲ್ಲವೆ
ರಾಮ ಕೃಷ್ಣ ಅವತಾರಗಳಲ್ಲಿ
ನೀನು ಮಾಡಿದ ಲೀಲೆಗಳೆಷ್ಟು?
ಕಲ್ಲು, ಬೇಟೆಗಾರ, ಪಶು ಪಕ್ಷಿಗಳಲ್ಲಿ
ಮುಕ್ತಿ ಕಂಡವು ನಿಮ್ಮಿಂದಲೆ
ನಿಮ್ಮ ನಾಮವನ್ನು ಸ್ಮರಿಸುವವನು
ಪುಣ್ಯ ಲೋಕ ಸೇರಿ ಕೊಳ್ಳುವನು
ನಿನ್ನ ನಾಮ ಕೊಡದಿರುವ ರಕ್ಷಣೆ ಯಾವುದಿದೆ?
ಆ ನಿನ್ನ ನಾಮ ಕೊಂಡಾಡುವುದರಿಂದ ಯಾವ ದುಃಖ ದೂರವಾಗದು?
ಓ ಶಿವ ನಿನ್ನ ನಾಮ ಸ್ಮರಿಸಿದರೆ
ದತ್ತರ ಗುಣ ಮಹಿಮೆಯನ್ನು ಕೇಳಿದರೆ





ಭೂತ, ಪಿಶಾಚಿ, ಜಂತು, ಅಸುರ ಓಡುವವೆ
ದತ್ತರ ಹೊಗಳ ಹಾಡುವ ದತ್ತ ಬಾವನಿಯನ್ನು
ದೀಪ ಹಚ್ಚಿ ಎರಡು ಹೊತ್ತು ಹಾಡುವವನು
ಎರಡು ಲೋಕದಲ್ಲೂ ಜಯಗೊಳ್ಳುತ್ತಾನೆ!
ಶೋಕ ಎಂಬುವದೇನೆಂದು ತಿಳಿಯನು
ಯೋಗ, ಸಿದ್ಧಿ ಅವನ ದಾಸನಾಗುತ್ತದೆ
ದುಃಖ, ದರಿದ್ರ ತೊಲಗುತ್ತವೆ
ಐವತ್ತೆರಡು ಗುರುವಾರ ನಿಯಮದಿಂದಲೇ
ದತ್ತ ಬಾವನಿ ಪ್ರೀತಿಯಿಂದ ಓದಿದರೆ
ದಿನ ನಿತ್ಯ ಭಕ್ತಿಯಿಂದ ಹೇಳಿದರೆ
ಯಮನೂ ಹತ್ತಿರ ಬರಲು ಹೆದರುತ್ತಾನೆ
ಅನೇಕ ರೂಪವಿದ್ದರೂ ದೇವರು ಒಂದೇ
ದತ್ತ ದಿಗಂಬರಾ! ನಮ್ಮ ದೈವ ನೀನೇ
ವಂದಿಸುವೆ ನಿನ್ನನ್ನು ಪುನಃ ಪುನಃ
ವೇದ ಪಾಠಗಳು ಹುಟ್ಟಿದುವು ನಿನ್ನ ಶ್ವಾಸದಿಂದಲೆ
ಶೇಶನು ನಿನ್ನನ್ನು ವರ್ಣಿಸುತ್ತಾನೆ
ಈ ಜನುಮದ ಮೂರ್ಖ ನಾನು ಹೇಗೆ ವರ್ಣಿಸಲಿ?
ನಾಮಾರ್ಪಣೆ ಮಾಡಿದ ತೃಪ್ತಿ ಸಿಗುತ್ತದೆ
ನಿನ್ನನ್ನರಿಯದ ಮೂರ್ಖನು ಸಿದ್ಧಿ ಕಾಣುತ್ತಾನೋ?
ತವಸಿ ತತ್ವಮಸಿ ಅವನೇ ದೇವನೇ
ಹಾಡು ಓ ಮನವೇ ಜಯ ಜಯ ಶ್ರೀ ಗುರುದೇವನೇ

| | | |
|---|---|---|
| ಬಾವನಿ | – | ಐವತ್ತೆರಡು ಸಾಲುಗಳು |
| ಸ್ಮರ್ತುಗಾಮಿ | – | ಸ್ಮರಿಸಿದ ತಕ್ಷಣ ಓಡಿ ಬರುವವರು |
| ದಿತಿಸುತ | – | ರಾಕ್ಷಸ |
| ಅರ್ಜುನ | – | ಸಹಸ್ರಾರ್ಜುನ |
| ದ್ವಿಜ | – | ಎರಡು ಸಾರಿ ಜೀವ ಕಂಡ ಬ್ರಾಹ್ಮಣ, ವೈಶ್ಯ, ಕ್ಷತ್ರಿಯ ಕುಲದವರು |

★ ★ ★



# ಶ್ರೀ ಸಾಯಿನಾಥರ ಅಷ್ಟಕ

1. ಪಾರ್ವತಿ ದೇವಿ ಹೆತ್ತ ಐದು ಕರಗಳು ಕೊಂಡ ವಿಘ್ನೇಶ್ವರನನ್ನು ಬೇಡುವ ನನ್ನ ದೈವ ಸಾಯಿನಾಥಾ! ಅತ್ರಿ ಅನುಸೂಯ ಹೆತ್ತ ತ್ರಿಮೂರ್ತಿಗಳು ಸೇರಿದ ದತ್ತ ಅವತಾರವೆ! ವಾಸುಕಿ ಸಮುದ್ರ ಕಡೆದಾಗ ಸಿಕ್ಕಿದ ಅಮೃತ ತುಂಬಿರುವ ಸ್ಥಳವಾದ ಶಿರಡಿಯಲ್ಲಿ ಅವತಿರಿಸಿದ ಪರಬ್ರಹ್ಮವೆ! ಕಲ್ಪವೃಕ್ಷವೇ! ಕಲಿಯುಗದಲ್ಲಿರುವ ಮಹಾ ದೈವವೇ! ಶೀ ಪಾದ ವಲ್ಲಭನೇ! ನರಸಿಂಹ ಸರಸ್ವತಿಯೋ! ಅಕ್ಕಲ್ಕೋಟ್ ಸ್ವಾಮಿ ಸಮರ್ಥನೇ! ಭಕ್ತರ ದುಃಖವನ್ನು ತೀರಿಸುವ ಅನಾಥರಕ್ಷಕನೇ! ಅಲ್ಲಾವಿನ ಮಗನೇ! ಅಡ್ಡಿ ಆಪತ್ತುಗಳನ್ನು ದೂರ ಮಾಡಿ, ಸುಖ ಶಾಂತಿ ನೀಡುವುದಕ್ಕೆ ಓಡಿ ಬಂದು ದಯೆ ಮಾಡು ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥಾ!

2. ದಿನ ನಿತ್ಯವೂ ಸಾಯಿ ನಾಮವೇ ಪ್ರಧಾನವೆಂದು ನೆನೆದು, ನನ್ನ ಕರ್ತವ್ಯವನ್ನು ಮರೆತು, ನಿನ್ನನೇ ನೆನೆದು ನಿನ್ನನ್ನೇ ಶರಣಾಗಿ ಹಲವಾರು ಪೂಜೆಗಳನ್ನು ಮಾಡಿದ್ದೇನೆ. ನಿನ್ನ ಚರಿತೆಯನ್ನು ಓದಿದೆ. ನಿನ್ನ ನಾಮ ಜಪಿಸಿದೆ. ನಿನ್ನ ಮಾತಿನಂತೆ ಅನ್ನದಾನ ಮಾಡಿದೆ. ಯಾರ ಮನಸ್ಸನ್ನೂ ನೋಯಿಸಲಿಲ್ಲ. ಇಷ್ಟು ಮಾಡಿದರೂ ಕೂಡ, ಈ ಕ್ಷಣ ನಾನು ತುಂಬ ದುಃಖಗೊಂಡಿರುವುದಕ್ಕೆ ಕಾರಣವೇನು? ನಾನು ಮಾಡಿದ ತಪ್ಪೇನು ಎಂದು ಹೇಳು. ಭಕ್ತಿಯ ವೇಷವನ್ನು ಧರಿಸಿ ಭಕ್ತಿಯ ನಾಟಕ ಮಾಡುವ ನೀಚ ನಾನೆಂದು ತಿಳಿದಿರುವೆಯೋ? ಕಷ್ಟಗೊಂಡಿರುವ ನನ್ನನ್ನು ಓಡಿ ಬಂದು ಕಾಪಾಡು ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥಾ!

3. ನಿನ್ನ ಆರಕ್ಷಣೆಯಿಂದ ಭಕ್ತರನ್ನು ನಿನ್ನ ಪಾಲಿಗೆ ಎಳೆದುಕೊಂಡೆ. ಕೋಟ್ಯಾಂತರ ಭಕ್ತರು ನಿನ್ನ ಶರಣಾದದ್ದರಿಂದ, ನನಗೆ ದಯೆ ತೋರಲು ನಿನಗೆ ಸಮಯವಿಲ್ಲವೇ? ಮನಸ್ಸಿಲ್ಲವೇ? ಒಂದು ಕ್ಷಣವು ನಾನು ನಿನ್ನಿಂದ ದೂರವಾಗಲಾರೆ. ನನ್ನ ಭಕ್ತಿಯಲ್ಲಿ ನೀಕಂಡ ತಪ್ಪೇನು? ಓ ಸಾಯಿ! ಹೋದ ಜನ್ಮಕೃತ ಪಾಪವೋ? ನಾನರಿಯೇ! ಪಾಪವನ್ನು ಭಸ್ಮ ಮಾಡುವುದಕ್ಕೆ ನಿನ್ನ ದಯೆಯೊಂದು ಸಾಕಲ್ಲವೇ? ಕರುಣಾ ಸಾಗರಾ! ಹೆತ್ತವರಂತೆ ದಯೆ ತುಂಬಿರುವ ಮನಸ್ಸಿರುವವರೇ! ಮಗು ಅತ್ತರೆ, ನಿನ್ನೀ ಮನಸ್ಸು ಒಪ್ಪಲ್ಲ ಅಲ್ಲವೇ? ನಿನ್ನ ನಾಮವನ್ನೇ ಹೇಳುತ್ತಿರುವ ನನಗೆ ಓಡಿ ಬಂದು ದಯೆ ಮಾಡು ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥಾ!





4. ತುಂಬ ಕಠೋರ ವಿಷಸರ್ಪ ಕಚ್ಚಿದರೂ, ಶಾಮನನ್ನು ಯಮನಿಂದ ತಪ್ಪಿಸಿದೆ ಓ ಸರ್ವೇಶಾ! ಶೇಷಸಾಯಿ ನನ್ನನ್ನು ಕಾಪಾಡಲು ಯಾಕೆ ಇಷ್ಟು ಯೋಚನೇ? ಕಣ್ಣೀರು ಇಂಗಿದೆ! ನಾಲಿಗೆಯೋ ಸಾಯಿ ನಾಮ ಹಾಡಿ ಒಣಗಿ ಹೋಗಿದೆ! ನನ್ನ ಮೇಲೆ ನೀನು ಕೋಪಗೊಂಡ ಕಾರಣವೇನು ಸ್ವಾಮಿ? ನಾನರಿಯಲಾರೆ! ನಿನ್ನ ನೆನಪಿಲ್ಲದೆ ಯಾವುದನ್ನೂ ನೆನೆಯಲಾರೆ! ನೀನೇ ಆಶ್ರಯವೆಂದು ತಿಳಿದಿದ್ದೆ ನಾನು. ನನ್ನ ಭಕ್ತಿ ಸ್ವೀಕರಿಸಿ ಈ ಕ್ಷಣವೇ ನನ್ನ ಕಣ್ಣ ಮುಂದೆ ಬಂದು ಬೇಡಿದ ವರ ಕೊಡುವುದಕ್ಕೆ ಓಡಿ ಬಾ ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥಾ!

5. ಶುದ್ಧ ಮನಸ್ಸಿನಿಂದ ನಾನು ನಿನ್ನ ಮೇಲೆ ಇಟ್ಟು ಕೊಂಡಿರುವ ಭಕ್ತಿ ಸತ್ಯವೆ. ನಿನ್ನ ಕಥೆ ಓದಿ ಸಾಯಿ ಭಕ್ತನಾಗಿ ನಿನ್ನ ಕಮಲ ಪಾದದಲ್ಲಿ ಶರಣಾಗಿದ್ದೇನೆ. ನನ್ನ ಕಷ್ಟ ನೀನು ತೀರಿಸಲಿಲ್ಲವೆಂದರೆ ಈ ಜಗ ನಿನ್ನನ್ನು ನಂಬುವುದಿಲ್ಲ. ಸಾಯಿ ನಿನಗೆ ಕರುಣೆ ತೋರಲಿಲ್ಲ, ನಿನ್ನ ಭಕ್ತಿ ಒಂದು ನಾಟಕ ಎಂದು ಅಪಮಾನಿಸುತ್ತದೆ. ಸಾಯಿ ಭಕ್ತನಿಗೆ ಕಷ್ಟವೇ? ಈ ಲೋಕ ನಿನ್ನನ್ನು ದೂರುತ್ತದೆ! ಲೋಕ ನಿನ್ನನ್ನು ದೂರಿದರೆ ನಾನು ತಾಳಲಾರೆ. ದೂಷಿಸುವದರಿಂದ ಕಾಪಾಡಿ ಭಕ್ತನಿಗೆ ಓಡಿ ಬಂದು ದಯೆ ಮಾಡಿ ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥಾ!

6. ಏನು ಗೊತ್ತಿಲ್ಲದಿರುವ ಮೂರ್ಖನ ಹಾಗೆ ದೇವರನ್ನು ಅರಿಯದೆ ತಿರುಗಾಡುತ್ತಿದ್ದ ನನ್ನನ್ನು ನಿನ್ನ ಶರಣಾಗುವಂತೆ ಮಾಡಿ, ಭಕ್ತನೂ ಮಾಡಿದೆ! ಯಾವ ವ್ರತವು ಒಂದೇ ಎಂಬ ಸರ್ವ ತತ್ತ್ವ ಭೋದಕನೇ. ಈ ಕ್ಷಣ ನೀನು ಬಂದು ನನ್ನ ಕಷ್ಟವನ್ನು ದೂರ ಮಾಡದಿದ್ದರೆ, ನಾಸ್ತಿಕರು ಆನಂದಗೊಳ್ಳುತ್ತಾರೆ. ದೈವವೆಂಬುದು ಸುಳ್ಳು ಎಂದು ನಗುತ್ತಾರೆ. ನೀನು ಸುಳ್ಳಲ್ಲ. ನೀನು ಸತ್ಯ ಇದನ್ನು ನಾನು ತಿಳಿದಿದ್ದೇನೆ. ಸತ್ಯವಾಗಿಯೂ ಈ ಜಗವೆಲ್ಲವೂ ನೀನು ತುಂಬಿರುವೆ ಎಂದು ಹೆಮ್ಮೆಯಿಂದ ಹೇಳುವ ನನಗೆ ಓಡಿ ಬಂದು ದಯೆ ಮಾಡು ಪವಿತ್ರವಾದ ನಗರ ಶಿರಡಿನಿವಾಸ ಸಾಯಿ ನಾಥಾ!

7. ಅಗ್ನಿಹೋತ್ರಿಯಂತೆ ಧುನಿಯನ್ನು ಉರಿಸಿ ಉದಿಯಿಂದ ಭಕ್ತನ ರೋಗ, ದುಃಖ ದೂರ ಮಾಡುವ ದ್ವಾರಕಮಾಯಿ ನಿವಾಸ ಆನಂದ ಸಾಯಿ! ಪಂಚಭೂತವೂ ನಿನ್ನ ಕೈಯಲ್ಲಿ, ನೆನೆದ ಮಾತ್ರ ವಿಧಿಯನ್ನು ಬದಲಾಯಿಸುವ ವಿಶ್ವನಾಥ! ನೀನಲ್ಲದೇ ಬೆರೆ ಯಾರನ್ನೂ ಅರಿಯೆನು ಸ್ವಾಮಿ, ನನ್ನ ವೇದನೆ ತೀರಿಸು. ದುಃಖ ಸಾಗರದಲ್ಲಿ ತೇಲಾಡುವ ನಮಗೆ ದೋಣಿಯಂತೆ ಬಂದು ಕಾಪಾಡು. ನನ್ನ ಬೇಡಿಕೆಗಳನ್ನು ಆಸೆಯಿಂದ ಕೇಳಿ, ನನ್ನ ಕಷ್ಟ ತೀರಿಸಿ,

ಸುಖವನ್ನು ಕೊಡಿ. ಸಂಪತ್ತು, ಸಿದ್ಧಿ, ರೋಗವಿಲ್ಲದ ಜೀವನ, ದೈವ ಕೃಪೆ, ಸಿಗುವುದಕ್ಕೆ ಓಡಿ ಬಂದು ದಯೆ ಮಾಡಿ ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥ!

8. ನಾನಿರುವಾಗ ಭಯಬೇಕೆ? ನಂಬಿಕೆ ತಾಳ್ಮೆಯಿಂದ ಭಕ್ತಿಯಿಂದಿರು ಎಂದು ಹೇಳಿದೆ. ಎಷ್ಟು ಕಾಲ ತಾಳ್ಮೆಯಿಂದ ಇರಬಲ್ಲೆನು? ತಾಳ್ಮೆಗೂ ಒಂದು ಮಿತಿಯುಂಟಲ್ಲವೇ? ನಾನು ಮಹಾದೇವನಲ್ಲ. ಜನನ, ಮರಣ, ಹೊಂದಿರುವ ಸಾಮಾನ್ಯ ಮನುಷ್ಯ. ಕಾಲ ದಾಟಿ ಹೋಯಿತಲ್ಲ. ಎಲ್ಲರೂ ಮುಂದುವರೆದರು. ದುಃಖದಿಂದ ಮನಸ್ಸಿಗೆ ಭಾರವಾಯಿತಲ್ಲವೇ? ದುಃಖದಿಂದ ಅಲ್ಲಾಡುತ್ತಿರುವ ಭಕ್ತನಿಗೆ ಕೃಪೆ ತೋರಿಸಿ, ಬೇಕಾಗಿರುವ ಹದಿನಾರು ಸಂಪತ್ತುಗಳೊಡನೆ ಶ್ರೇಷ್ಠವಾದ ಜೀವನ, ಒಳ್ಳೆಯ ಹೆಸರು ಆರೋಗ್ಯ, ಆಯುಸ್ಸು ಹೊಗಳಿಕೆ ತರುವ ಸಿದ್ಧಿ, ಧನ, ಧಾನ್ಯ ಎಲ್ಲವೂ ಪ್ರೀತಿಯಿಂದ ಕೊಡುವುದಕ್ಕೆ ಓಡಿ ಬಂದು ದಯೆ ಮಾಡು ಪವಿತ್ರವಾದ ನಗರ ಶಿರಡಿನಿವಾಸ ಸಾಯಿನಾಥಾ!

ಶ್ರೀ ಸಾಯಿನಾಥರಿಗೆ ಅರ್ಪಣೆ ★ ★ ★

## ಶ್ರೀ ಸಾಯಿ ಬಾಬಾ ನಾಮಾರ್ಪಣೆ

ಶಿರಡಿಯೇ ಲೋಕದ ಅಂದದ ಪುಣ್ಯಸ್ಥಳ ।
ಶ್ರೀ ಸಾಯಿ ಬಾಬಾ ಅವತರಿಸಿ ಕೃಪೆ ತೋರುವ ಸ್ಥಳ ॥
ಕಲ್ಪ ವೃಕ್ಷಕ್ಕಿಂತ ಹೆಸರುಗೊಂಡ ಬೇವಿನ ಮರ ।
ಅದರ ಅಡಿಯಲ್ಲಿ ಕುಳಿತವರೇ ದೇವರ ವರ ॥
ಹದಿನಾರೆ ವರ್ಷದ ಬಾಲಕನವನು ।
ಹಲವಾರು ಸೂರ್ಯ ಚಂದ್ರನ ಪ್ರಕಾಶ ಹೊಂದಿದವನು ॥
ಜ್ಞಾನ, ರೂಪ ತುಂಬಿದ ದೇವರ ಮಗನು ।
ನೀನು ಕುಳಿತಿದ್ದದ ಫಲ, ಕಹಿ ಬೇವು ಆಯಿತು ಸಿಹಿಯು ॥
ಲಕ್ಷ್ಮಿ ಕುಡಿಗೊಂಡಳು ನಿನ್ನ ಹಣೆಯಲ್ಲಿ ತಿಲಕವಂತೆ ।
ತೇಜಸ್ಸು, ಸೌಮ್ಯ, ತುಂಬಿದ ರೂಪವಂತೆ ॥
ಬಿಸಿಲು, ಮಳೆ ನೋಡದೆ ತಪಸ್ಸು ಮಾಡಿದೆ ।
ಬಾಲಕನ ರೂಪಕೊಂಡು ಲೋಕದಲ್ಲಿ ಅವತರಿಸಿದೆ ॥





ನಿನ್ನ ತಾಯಿ ತಂದೆ, ಕುಲ ಗೋತ್ರ ಯಾರಿಗೂ ತಿಳಿಯದು ।
ಈ ಜಗವೆ ನನ್ನ ಮನೆ, ದೇವನೆ ನನ್ನ ತಂದೆ-ತಾಯಿ ಎಂದೆ ॥
ಕೆಲವು ಜನರು ಹೇಳಿದರು ನೀನು ಶಿವನ ರೂಪವೆಂದು ।
ಮತ್ತೊಬ್ಬರು ಅಂದರು ನೀನು ವಿಷ್ಣು ರೂಪವೆಂದು ॥
ದತ್ತಾತ್ರೇಯ ರೂಪವೋ ? ಶ್ರೀ ರಾಮನೇ ನೀನೋ ।
ಬೀರ್ ಅವುಲಿಯಾನೋ ? ಪರಬ್ರಹ್ಮನೇ ನೀನೋ ॥
ಯಾವ ರೂಪವಾದರೇನು ನೀನೆ ನಮ್ಮ ದೇವ ।
ಭಕ್ತರ ಇಷ್ಟರೂಪದಲ್ಲಿ ಕೊಡುವೆ ನ್ನಿನ ದರ್ಶನ ॥
ಎಂತಹ ಎಂತಹ ಲೀಲೆಗಳು ಮಾಡಿದೆಯೋ ।
ಸಾಕು ಅಂತ ಅನ್ನಿಸದಂತ ಸುಖವಲ್ಲವೇ ನಿನ್ನ ಕಥೆ ॥
ಕೇಳುವವರು ಮುಳುಗುವರು ನಿನ್ನ ಅಮೃತಧಾರೆಯಲ್ಲಿ ॥
ಜಾತಿ, ಮತ, ಪಂಥ, ಭೇದದಿಂದ ನಾವು ಅಳಿಯುತ್ತೇವೆ ।
ಉದ್ಧರಿಸುವ ನೀನು ಮಹಾ ಅವತಾರವಲ್ಲವೇ ॥
ಚಾಂದ್ ಪಾಟೀಲನ ಕುದುರೆಯ ಹುಡುಕಿ ಕೊಟ್ಟೆ ।
ಮದುವೆ ಮನೆಯವರ ಜೊತೆ ಶಿರಡಿ ಸೇರಿಕೊಂಡೆ ॥
ಆತ್ಮೀಯವಾದ ಬೋಧನೆಯ ಕೊಟ್ಟೆ ।
ದಯೆಯೊಡನೆ ಅದ್ಭುತ ಅನುಭವಗಳನ್ನೂ ಕೊಟ್ಟೆ ॥
ಮಸಿದಿಮಾಯಿ ದ್ವಾರಕಮಾಯಿ, ಅಲ್ಲಿಯೇ ಇದ್ದು ।
ಭಕ್ತರನ್ನು ರಕ್ಷಿಸುವ ನೀನು ತಾಯಿಯಲ್ಲವೇ ನಮಗೂ ॥
ಪವಿತ್ರವಾದ ಕರಗಳು ಕೊಟ್ಟ ಉದಿ ಅದ್ಭುತವಾದುದು ।
ನಿನ್ನ ಧನಿಯಲ್ಲಿ ನಮ್ಮ ಪಾಪ ಭಸ್ಮವಾಗುವುದು ॥
ನಿನ್ನ ಮೃದುವಾದ ಕರಗಳನ್ನು ನನ್ನ ಮೇಲಿಡು ಸ್ವಾಮಿ ।
ಸತ್ಪುರುಷ ನಿನ್ನ ಬೇಡುವೆನು ದಯೆ ಮಾಡು ಸಾಯಿ ॥
ನಿನ್ನ ಪಾದಾರವಿಂದ ಮುಟ್ಟಿದ ಧೂಳೊಂದು ಸಾಕು ।
ನನ್ನ ಕಣ್ಣಲ್ಲಿ ಒತ್ತಿ ಸಂತೋಷಿಸುತ್ತೇನೆ ॥
ನಿನ್ನ ಪದಕಮಲ ತೀರ್ಥ ನನ್ನ ನಾಲಿಗೆ ಮುಟ್ಟಿದರೆ ।
ನಾನು ಕಂಡ ಆನಂದವನ್ನು ಹಾಡಿ ತೀರಿಸುವೆ ॥
ಕನಸ್ಸಿನಲ್ಲೂ ನನ್ನನ್ನು ನೀನು ಆಳುವೆ ।
ನಿಜದಲ್ಲಿ ದಿನನಿತ್ಯ ನನ್ನ ಜೊತೆ ನಿಂತಿರುವೆ ॥

ಅಖಿಲಾಂಡ ಚರಾಚರ ದೈವ ನೀನೆ ।
ಎಲ್ಲೆಲ್ಲು ನೋಡಿದರು ಕಾಣಿಸುವುದು ನೀನೇ ॥
ನನ್ನ ತಾಯಿಯು ನೀನು ತಂದೆಯು ನೀನು ।
ಈ ಲೋಕವನ್ನು ಮೂರಡಿಯೆಂದು ಅಳೆದ ವಾಮನನೂ ನೀನು ॥
ಅಖಿಲವೇ ನಿನ್ನ ಮನೆ, ವಿಶ್ವವೇ ನಿನ್ನ ರೂಪ ।
ಭಕ್ತರಿಗೆ ದಯೆ ಮಾಡುವುದಕ್ಕೆ ನೀನು ಅವತರಿಸಿದೆ ॥
ಕುಚೇಲನನ್ನು ಕುಬೇರ ಮಾಡುವ ಶಕ್ತಿ ಇದ್ದರೂ ।
ಭಿಕ್ಷ ಬೇಡಿ ನೀನು ನಿನ್ನ ಊಟ ಮಾಡಿದೆ ॥
ಸಾಯಿ ನಾಮವೆ ಹಲವಾರು ದುಃಖವನ್ನು ದೂರ ಮಾಡುತ್ತದೆ ।
ಸಾಯಿ ನಾಮವೆ ಎಂದೂ ಕೊಡುವುದು ಪರಮ ಸುಖವಲ್ಲವೇ ॥
ಸಾಯಿ ನಾಮ ಜಪಿಸಿ ಗುರುವಾರ ವ್ರತ ಮಾಡಿದರೆ ।
ಸಾಯಿ ನಾಮ ಕೊಡುವುದೆಲ್ಲ ಸಂತೋಷವೇ ॥
ರೋಗಿಯರ ವೇದನೆ ತೀರುತ್ತದೆ ।
ಕಷ್ಟಗೊಂಡವರ ದುಃಖಗಳ ದೂರಾಗುತ್ತದೆ ॥
ಸಾಯಿ ಕೃಪೆಯಿಂದ ದರಿದ್ರ ತೊಳೆಯುತ್ತದೆ ।
ಸಾಯಿ ವ್ರತದಿಂದ ಸುಖ, ಶಾಂತಿ ಮನೆಯಲ್ಲಿ ತುಂಬುತ್ತದೆ ॥
ಸಾಯಿ ನಾಮವನ್ನು ದಿನವೂ ಜಪಿಸಿದರೆ, ಜೊತೆಯಲ್ಲಿ ।
ಒಂಭತ್ತು ಗುರುವಾರ ಸಾಯಿ ವ್ರತ ಮಾಡಿದ್ದರೇ ॥
ಸಾಯಿ ಬರುತ್ತಾರೆ ನಮಗೆ ದಯೆ ತೋರುತ್ತಾರೆ ।
ದುಃಖವನ್ನು ಕಳೆದು ನಮಗೆ ಆನಂದ ಕೊಡುತ್ತಾರೆ ॥
ಸಾಯಿಯೇ ಶಾಶ್ವತ ! ಸಾಯಿಯೇ ಸತ್ಯ !
ಇದನ್ನು ನಂಬುವವನ ಬಾಳಿನಲ್ಲಿ ಇಲ್ಲ ದುಃಖ ॥
ಸಾಯಿಯೇ ಪರಮೇಶ್ವರ ! ಸಾಯಿಯೇ ಪರಮಾತ್ಮ !
ಸಾಯಿಯೇ ಶಕ್ತಿರೂಪನು ! ಸಾಯಿಯೇ ಪರಂಧಾಮ !
ನಂಬಿಕೆ ಭಕ್ತಿ ತಾಳ್ಮೆಯಿಂದ ಶರಣಾಗುವೆ ।
ಸಾಯಿ ಕೃಪೆಯಿಂದ ಪರಬ್ರಹ್ಮಾನಂದ ಹೊಂದುವೆ ॥

ಶ್ರೀ ಸಾಯಿನಾಥರಿಗೆ ಅರ್ಪಣೆ

ಉದಿ – ಬಾಬಾ ಕೊಟ್ಟ ವಿಭೂತಿ
ಕಫ್ನಿ – ಬಾಬಾ ಉಡುವ ಬಟ್ಟೆ

★ ★ ★





## ಗುರು ಓಂ

1. ಓಂ ಸ್ರೀ ಸಾಯಿ ಗಣೇಶಾಯ ನಮಃ
2. ಓಂ ಸದ್ಗುರು ಸಾಯಿನಾಥಾಯ ನಮಃ
3. ಓಂ ಜಗದ್ಗುರು ಸಾಯಿನಾಥಾಯ ನಮಃ
4. ಓಂ ಪರಮಗುರು ಸಾಯಿನಾಥಾಯ ನಮಃ
5. ಓಂ ದೇವಗುರು ಸಾಯಿನಾಥಾಯ ನಮಃ
6. ಓಂ ಸಾಯಿ ಶಿವಶಕ್ತ್ಯೆ ನಮಃ
7. ಓಂ ಸಾಯಿ ಸರ್ವಶಕ್ತಿ ಮಾನಾಯ ನಮಃ
8. ಓಂ ಸಾಯಿ ಸರ್ವ ವ್ಯಾಪಕಾಯ ನಮಃ
9. ಓಂ ಸಾಯಿ ಸರ್ವ ಆತ್ಮಾಯ ನಮಃ
10. ಓಂ ಸಾಯಿ ಅಖಿಲ ನಿರಂಜನಾಯ ನಮಃ
11. ಓಂ ಸಾಯಿ ಸರ್ವ ಸಾಕ್ಷಿಯಾಯ ನಮಃ
12. ಓಂ ಸಾಯಿ ಅಂತರ್ಯಾಮಿಯಾಯೆ ನಮಃ
13. ಓಂ ಸಾಯಿ ಪರಿಪೂರಣಾಥ ನಮಃ
14. ಓಂ ಸಾಯಿ ಆದಿಶಕ್ತ್ಯೆ ನಮಃ
15. ಓಂ ಸಾಯಿ ಅನಾದಿ ಶಕ್ತ್ಯೆ ನಮಃ
16. ಓಂ ಸಾಯಿ ರಾಮಾಯ ನಮಃ
17. ಓಂ ಸಾಯಿ ತ್ರಿಲೋಕನಾಥಾಯ ನಮಃ
18. ಓಂ ಸಾಯಿ ತ್ರೈಕಾಲದರ್ಶಿಯಾಯ ನಮಃ
19. ಓಂ ಸಾಯಿ ಗೋವಿಂದಯಾ ನಮಃ
20. ಓಂ ಸಾಯಿ ಸಚ್ಚಿದಾನಂದ ಸ್ವರೂಪಾಯ ನಮಃ
21. ಓಂ ಸಾಯಿ ಭಕ್ತ ರಕ್ಷಕಾಯ ನಮಃ
22. ಓಂ ಸಾಯಿ ಪರಮಾನಂದ ಸ್ವರೂಪಾಯ ನಮಃ
23. ಓಂ ಸಾಯಿ ಮಹಾದುರ್ಗಾಯ್ಯೆ ನಮಃ
24. ಓಂ ಸಾಯಿ ಆಕರ್ಷಣ ಶಕ್ತಿಯಾಯ ನಮಃ
25. ಓಂ ಸಾಯಿ ಅಜ್ಞಾನ ವಿನಾಶಕಾಯ ನಮಃ
26. ಓಂ ಸಾಯಿ ಯೋಗೀಶ್ವರಾಯನ ನಮಃ
27. ಓಂ ಸಾಯಿ ಪುರುಷೋತ್ತಮ ಪುರುಷಾಯ ನಮಃ
28. ಓಂ ಸಾಯಿ ಶಂಕರಾಯ ನಮಃ
29. ಓಂ ಸಾಯಿ ಸುಖಸ್ವರೂಪಾಯ ನಮಃ

30. ಓಂ ಸಾಯಿ ಕಲ್ಯಾಣ ಸ್ವರೂಪಾಯ ನಮಃ
31. ಓಂ ಸಾಯಿ ಜಗಆಧಾರಾಯ ನಮಃ
32. ಓಂ ಸಾಯಿ ರಘುನಂದನಾಯ ನಮಃ
33. ಓಂ ಸಾಯಿ ದೇರಕ್ಷಕಾಯ ನಮಃ
34. ಓಂ ಸಾಯಿ ಅಸುರ ಸಂಹಾರಿಯಾಯ ನಮಃ
35. ಓಂ ಸಾಯಿ ಕರ್ಮ ಫಲ ದಾತಾಯ ನಮಃ
36. ಓಂ ಸಾಯಿ ದತ್ತಾತ್ರೇಯ ನಮಃ
37. ಓಂ ಸಾಯಿ ಕರ್ತಾಪುರುಷಾಯ ನಮಃ
38. ಓಂ ಸಾಯಿ ದೀನಬಂಧುವಾಯ ನಮಃ
39. ಓಂ ಸಾಯಿ ಭಗತ್ ಭಯಹಾರಿಯಾಯ ನಮಃ
40. ಓಂ ಸಾಯಿ ದುಃಖ ನಿವಾರಣಾಯ ನಮಃ
41. ಓಂ ಸಾಯಿ ಅಕಾಲ ಪುರುಷಾಯ ನಮಃ
42. ಓಂ ಸಾಯಿ ಆದಿನಾರಾಯಣಾಯ ನಮಃ
43. ಓಂ ಸಾಯಿ ಲೀಲಾಧಾರಿಯಾಯ ನಮಃ
44. ಓಂ ಸಾಯಿ ಜನಹಿತ್‌ಕಾರಿಯಾಯ ನಮಃ
45. ಓಂ ಸಾಯಿ ಶಿವಶಂಭುವಾಯ ನಮಃ
46. ಓಂ ಸಾಯಿ ಆಪತ್ತಿಹರಣಾಯ ನಮಃ
47. ಓಂ ಸಾಯಿ ಶರಣಾಗತವತ್ಸಲಾಯ ನಮಃ
48. ಓಂ ಸಾಯಿ ಮಾಧವಾಯ ನಮಃ
49. ಓಂ ಸಾಯಿ ರಾಖಿನ್‌ಹಾರಾಯ ನಮಃ
50. ಓಂ ಸಾಯಿ ಜಗತ್ಕಾರಣಾಯ ನಮಃ
51. ಓಂ ಸಾಯಿ ಸದ್ಗತಿ ದಾಸಾಯ ನಮಃ
52. ಓಂ ಸಾಯಿ ಮಹಾಕಾಳಿಕಾಯೈ ನಮಃ
53. ಓಂ ಸಾಯಿ ಕರುಣಾಸಿಂಧುವಾಯ ನಮಃ
54. ಓಂ ಸಾಯಿ ಸರ್ವೇಶ್ವರಾಯ ನಮಃ
55. ಓಂ ಸಾಯಿ ಜಗದೀಶ್ವರಾಯ ನಮಃ
56. ಓಂ ಸಾಯಿ ಅಕಾಲ ಶಕ್ತೈ ನಮಃ
57. ಓಂ ಸಾಯಿ ಪತಿತ ಪಾವನಾಯ ನಮಃ
58. ಓಂ ಸಾಯಿ ವಿಶ್ವನಾಥಾಯ ನಮಃ
59. ಓಂ ಸಾಯಿ ದೇವಸ್ವರೂಪಾಯ ನಮಃ





60. ಓಂ ಸಾಯಿ ಸುಖದಾತಾಯ ನಮಃ
61. ಓಂ ಸಾಯಿ ಹರಿನಾರಾಯಣಾಯ ನಮಃ
62. ಓಂ ಸಾಯಿ ಸತ್ಯ ಸ್ವರೂಪಾಯ ನಮಃ
63. ಓಂ ಸಾಯಿ ಸರ್ವ ಸಮರ್ಪಣಾಯ ನಮಃ
64. ಓಂ ಸಾಯಿ ಜ್ಯೋತಿ ಸ್ವರೂಪಾಯ ನಮಃ
65. ಓಂ ಸಾಯಿ ಮಹಾಲಕ್ಷ್ಮ್ಯೈ ನಮಃ
66. ಓಂ ಸಾಯಿ ಹರಿಗೋವಿಂದಾಯ ನಮಃ
67. ಓಂ ಸಾಯಿ ಸೋಹಮ್ ದೇವಾಯ ನಮಃ
68. ಓಂ ಸಾಯಿ ಓಂಕಾರಸ್ವರೂಪಾಯ ನಮಃ
69. ಓಂ ಸಾಯಿ ಮಹಾಸರಸ್ವತ್ಯೈ ನಮಃ
70. ಓಂ ಸಾಯಿ ಮಾಯಾವಿನಾಶಕಾಯ ನಮಃ
71. ಓಂ ಸಾಯಿ ವೆಂಕಟೇಶಾಯ ನಮಃ
72. ಓಂ ಸಾಯಿ ಹರಿವಿಟ್ಠಲಾಯ ನಮಃ
73. ಓಂ ಸಾಯಿ ಮೋಹವಿನಾಶಕಾಯ ನಮಃ
74. ಓಂ ಸಾಯಿ ವಿಪತ್ತಿಭಂಜನಾಥ ನಮಃ
75. ಓಂ ಸಾಯಿ ಭಕ್ತಿ ದಾತಾಯ ನಮಃ
76. ಓಂ ಸಾಯಿ ಮುಕ್ತಿದಾತಾಯ ನಮಃ
77. ಓಂ ಸಾಯಿ ಜ್ಞಾನ ದಾತಾಯ ನಮಃ
78. ಓಂ ಸಾಯಿ ಗೋಪೀವಲ್ಲಭಾಯ ನಮಃ
79. ಓಂ. ಸಾಯಿ ಭವತಾರಕಾಯ ನಮಃ
80. ಓಂ ಸಾಯಿ ಸರ್ವಪ್ರಿಯಾಯ ನಮಃ
81. ಓಂ ಸಾಯಿ ಅಪರಾಧ ಹರ್ತಾತ ನಮಃ
82. ಓಂ ಸಾಯಿ ಪಂಢರೀನಾಥಾಯ ನಮಃ
83. ಓಂ ಸಾಯಿ ಕೃಪಾಸಾಗರಾಯ ನಮಃ
84. ಓಂ ಸಾಯಿ ಮಂಗಲಕಾರಿ ದೇವಾಯ ನಮಃ
85. ಓಂ ಸಾಯಿ ಅಮಂಗಲಹಾರಿ ದೇವಾಯ ನಮಃ
86. ಓಂ ಸಾಯಿ ಅಮೃತಸಿಂಧುವಾಯ ನಮಃ
87. ಓಂ ಸಾಯಿ ಶಾಂತಿದಾತಾಯ ನಮಃ
88. ಓಂ ಸಾಯಿ ಚಂದ್ರಮೌಳೀಶ್ವರಾಯ ನಮಃ
89. ಓಂ ಸಾಯಿ ಜಗದ್ರೂಪಾಯ ನಮಃ

90. ಓಂ ಸಾಯಿ ಆತ್ಮಜ್ಯೋತಿಯಾಯ ನಮಃ
91. ಓಂ ಸಾಯಿ ಲಕ್ಷ್ಮಿನಾರಾಯಣಾಯ ನಮಃ
92. ಓಂ ಸಾಯಿ ಅಭೇದಶಕ್ತಿಯಾಯ ನಮಃ
93. ಓಂ ಸಾಯಿ ವಿಶ್ವ ಆತ್ಮಾಯ ನಮಃ
94. ಓಂ ಸಾಯಿ ಪರಮಾತ್ಮಾಯ ನಮಃ
95. ಓಂ ಸಾಯಿ ಭಕ್ತವತ್ಸಲಾಯ ನಮಃ
96. ಓಂ ಸಾಯಿ ಅಗ್ನಿರೂಪಾಯ ನಮಃ
97. ಓಂ ಸಾಯಿ ಗಾಯತ್ರಿಯೈ ನಮಃ
98. ಓಂ ಸಾಯಿ ಮಹಾಅಂಬಿಕಾಯೈ ನಮಃ
99. ಓಂ ಧರ್ಮರಕ್ಷಕಾಯ ನಮಃ
100. ಓಂ ಸಾಯಿ ಸಿದ್ಧಿದಾತಾಯೈ ನಮಃ
101. ಓಂ ಸಾಯಿ ಬುದ್ಧಿದಾತಾಯ ನಮಃ
102. ಓಂ ಸಾಯಿ ಉರ್ಧ್ವಕಾಯ ನಮಃ
103. ಓಂ ಸಾಯಿ ಸಾಧುರಕ್ಷಕಾಯ ನಮಃ
104. ಓಂ ಸಾಯಿ ಚಿಂತಾನಾಶಕಾಯ ನಮಃ
105. ಓಂ ಸಾಯಿ ಆನಂದಮೂರ್ತಾಯ ನಮಃ
106. ಓಂ ಸಾಯಿ ಭಾಗ್ಯವಿಧಾತಾಯ ನಮಃ
107. ಓಂ ಸಾಯಿ ಹರಿಹರಾಯ ನಮಃ
108. ಓಂ ಸಾಯಿ ಪರಬ್ರಹ್ಮಾಯ ನಮಃ

★ ★ ★

## ಸಾಯಿ ಬಾಬಾ ನೈವೇದ್ಯ

ಓ ಸಾಯಿ ಬಾಬಾ ಸ್ವೀಕರಿಸಿ ನನ್ನ
ಪ್ರೀತಿಯಿಂದ ನಾನು ಕೊಟ್ಟ ಸಿಹಿ ಹಾಲು, ಅನ್ನ
ಮಾಡಿದ್ದೇನೆ ಸಿಹಿ ತಿಂಡಿಗಳು ಪ್ರೀತಿಯಿಂದ
ಇಟ್ಟಿದ್ದೇನೆ ಬಹು ತಿಂಡಿಗಳು ಭಕ್ತಿಯಿಂದ
ಪಾಯಸ ಹೋಳಿಗೆ ಅನ್ನ ಒಬ್ಬಟ್ಟು
ಸಂತೋಷಿಸುತ್ತೇನೆ ನಿನಗೆ ನೈವೇದ್ಯ ಇಟ್ಟು
ಗಂಗೆಯ, ಯಮುನೆಯ ಕಾವೇರಿಯ ನೀರು
ತರಿಸುವೆ, ಮಾಡು ನನ್ನ ಕಷ್ಟವೆಲ್ಲ ಪಾರು
ಎಲೆ ಅಡಿಕೆ ಲವಂಗ ಜೊತೆ ಏಲಕ್ಕಿ ಸೇರಿಸಿ
ತಾಂಬೂಲ ಕೊಡುತ್ತೇನೆ ಸ್ವೀಕರಿಸು ಸ್ವಾಮಿ
ಪ್ರತಿ ಗುರುವಾರ ಸಾಯಿ ಪೂಜೆ ಮಾಡುತ್ತೇನೆ
ನಿತ್ಯವೂ ನೈವೇದ್ಯ ಸಾಯಿಗೆ ಕೊಡುತ್ತೇನೆ





ಸಾಯಿ ನಿನ್ನ ದಯೆಯಿಂದ ಆನಂದ ಬೆಳೆಯುತ್ತದೆ
ಬಾಬಾ ನಿನ್ನ ನೋಟದಿಂದ ಬಾಳು ಬೆಳಗುತ್ತದೆ.

## ಸಾಯಿ ವಂದನೆ (2)

ವಂದನೆ ನಿನಗೆ ಬಾಬಾ ಸಾಯಿ
ಕಾಪಾಡು ನೀನೇ ನಮ್ಮ ತಾಯಿ
ನೀನಿರುವುದು ಈ ಜಗವೆಲ್ಲ
ನಿನ್ನ ನಾಮ ಸ್ಮರಣೆ ಅಚ್ಚು ಬೆಲ್ಲ (ವಂದನೆ)
ಪ್ರತಿ ಗುರುವಾರ ಪೂಜೆ ಮಾಡುವೆ
ಹಣ್ಣು ಹಾಲು ನೈವೇದ್ಯ ನಿನಗೆ ನೀಡುವೆ
ಕೋರೋ ವರ ಕೊಟ್ಟು ಸ್ವಾಮಿ ದಯೆ ಮಾಡು
ಒಳ್ಳೆಯ ದಾರಿಯಲ್ಲಿ ನಡೆಸಿ ರಕ್ಷಣೆ ನೀಡು (ವಂದನೆ)
ಆರತಿ ಮಾಡುವೆ ಗುರುವಾರ
ಹಾಕುವೆ ಹಳದಿ ಹೂವಿನ ಹಾರ
ದಯೆ ಮಾಡು ನಮಗೆ ಸಾಯಿನಾಥಾ
ರಕ್ಷಣೆ ನಮಗೆಂದೂ ನಿನ್ನ ಪಾದ (ವಂದನೆ)

★ ★ ★

## ಸಾಯಿ ಬಾಬಾರವರ ಆರತಿ

ಆರತಿ ಮಾಡುತ್ತೇವೆ ಶ್ರೀ ಸಾಯಿ ನಿಮಗೆ
ಆರತಿ ಮಾಡುತ್ತೇವೆ ಗುರುವಾರದಲ್ಲಿ
ಪರಮಾನಂದ ಸುಖವನ್ನು ನೀಡುವೆ ನೀನೇ
ದಯೆಯೊಡನೆ ಕೃಪೆಯನ್ನು ಕೊಡುವೆ ದಯಾಳನೇ
ದುಃಖ, ಶೋಕ ಸಂಕಟಗಳನ್ನು ತೀರಿಸುವವನೆ
ಬಾಳಲ್ಲಿ ಸಂತೋಷ ನೀಡುವವನೆ
ನಮ್ಮ ಮನದಲ್ಲಿ ನಿನ್ನನ್ನು ನೆನೆದ ಕೂಡಲೆ
ಆ ಕ್ಷಣವೇ ಬಂದು ಅನುಭವ ಕೊಡುವವನೆ
ನೀ ತರುವ ಉದಿಯನ್ನು ಹಣೆಗೆ ಇಟ್ಟೊಡನೆ
ಎಲ್ಲ ಕಷ್ಟಗಳೂ ದೂರ ಹೋದವು
ಪ್ರತಿ ದಿನ ಸಾಯಿ ನಾಮವೆ ಜಪಿಸುತ್ತೇವೆ
ಒಂದು ಕ್ಷಣವೂ ನಿಮ್ಮಿಂದ ದೂರವಾಗಲಾರೆ
ಗುರುವಾರ ನಿಮ್ಮನ್ನು ಪೂಜಿಸುತ್ತೇವೆ
ಒಂದು ಕ್ಷಣವೂ ನಿಮ್ಮಿಂದ ದೂರವಾಗಲಾರೆ

ಗುರುವಾರ ನಿಮ್ಮನ್ನು ಪೂಜಿಸುತ್ತೇವೆ
ದೇವಾ! ನಿನ್ನ ಕೃಪೆಯಿಂದ ಸುಖವಾಗಿದ್ದೇವೆ
ರಾಮ, ಕೃಷ್ಣ, ಹನುಮಂತನ ರೂಪದಲ್ಲಿ
ಅಂದವಾದ ದರ್ಶನವನ್ನು ನಮಗೆ ಕೊಡುವವನೆ
ಎಲ್ಲ ಮತ ಧರ್ಮದಲ್ಲೂ ಪೂಜಿಸಿದ್ದರೂ
ಭಕ್ತರ ಕೋರಿಕೆಯನ್ನು ತೀರಸುವವನೆ
ಸಾಯಿ ನಾಮವೇ ಸಿದ್ಧಿ ಕೊಡುತ್ತದೆ
ದೇವಾ! ಸಿದ್ಧಿಯ ಅರ್ಥ ನೀನಲ್ಲವೆ
ಸಾಯಿ ದಾಸನ ಈ ಆರತಿ ಹಾಡುವವನು
ನಿನ್ನ ದಯೆಯಿಂದ ಸರ್ವ ಸುಖ ಪಡೆಯುವನು.

★ ★ ★

## ನಾಮ ಸ್ಮರಣೆ

ಹರೇ ರಾಮ ಹರೇ ರಾಮ, ರಾಮ ರಾಮ ಹರೇ ಹರೇ
ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ
ಹರೇ ಸಾಯಿ ಹರೇ ಸಾಯಿ, ಸಾಯಿ ಸಾಯಿ ಹರೇ ಹರೇ
ಹರೇ ಬಾಬಾ ಹರೇ ಬಾಬಾ, ಬಾಬಾ ಬಾಬಾ ಹರೇ ಹರೇ
ಹರೇ ದತ್ತ ಹರೇ ದತ್ತ, ದತ್ತ ದತ್ತ ಹರೇ ಹರೇ

★ ★ ★

## ಸಾಯಿ ವಂದನೆ

ಕಣ್ತೇರೆದು ನೋಡು ನನ್ನ ಸಾಯಿ
ನೀನಿಲ್ಲದೆ ಎಲ್ಲೂ ನಾನಿಲ್ಲ ಸಾಯಿ
ನಾನು ಕುರುಡ ನಿನ್ನ ಬೆಳಕು ನೀಡು ನನಗೆ
ನೀನೇ ನಮ್ಮ ದೈವ ರಕ್ಷಣೆ ಕೊಡು ನಮಗೆ
ಗುರುವೆಂದು ನಿನ್ನನ್ನು ಸ್ಮರಿಸಿದೆ ಸಾಯಿ
ದಯೆವನ್ನು ತೋರುವ ನೀನೇ ನಮ್ಮ ತಾಯಿ
ಸುಖ ದುಃಖ ತುಂಬಿರುವ ಈ ಜಗವನ್ನು ಇಂದು
ತಿಳಿದುಕೊಂಡೆ ನಿನ್ನಿಂದ ಮಾಯೆ ಅದು ಎಂದು
ನಿನ್ನ ಚರಿತೆಯನ್ನು ಓದುವ ಅವಕಾಶ ಕೊಡು ಸಾಯಿ
ಪ್ರತಿ ಗುರುವಾರ ನಿನ್ನ ಪೂಜೆ ಮಾಡುವ ಅನುಮತಿ ನೀಡು ಸಾಯಿ
ಶರಣು ನಿನ್ನ ಕಮಲ ಪಾದಕ್ಕೆ ಬಾಬಾ
ಶರಣು ಶರಣು ನನ್ನ ಸಾಯಿ ಬಾಬಾ.

★ ★ ★